Karnataka Private Educational Institutions (Discipline and Control) Bill 1975—Introduction

SRI M. MALLIKARJUNASWAMY (Minister for Education).—Madam, I beg to introduce the Karnataka Private Educational Institutions (Discipline and Control) Bill, 1975.

MADAM SPEAKER.—The Bill is introduced.**

Motion of thanks to Governor's Address—(*Debate Continued*)

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಮಾತನಾಡುತ್ತ ನಾನು ಬೆಲೆ ಏರಿಕೆ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ಆಹಾರ ಪದಾರ್ಥಗಳ ವಸ್ತುಗಳ ಬೆಲೆ ದಿನೇ ದಿನೇ ಏರುತ್ತಿವೆಯೇ ಹೊರತು ಇದನ್ನು ಯಾರೂ ತಪ್ಪಿಸುವುದಕ್ಕೆ ಸಾಧ್ಯವಿಲ್ಲದಂತಹ ಪರಿಸ್ಥಿತಿ ಇಂದು ಬಂದಿದೆ. ಇದು ಬಹು ಅತಿ ಮುಖ್ಯವಾದ ವಿಚಾರ. ಆಹಾರದ ಸಾಮಾನುಗಳ ಬೆಲೆ ಈ ರೀತಿ ಏರುತ್ತಿರುವುದರಿಂದ ಇದನ್ನು ಸರಿಪಡಿಸುತ್ತೇವೆ ಎನ್ನುವ ಅಂಶವನ್ನು ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗಿದೆ. ಸರಕಾರದವರು ಬೆಲೆ ಇಳಿಸುವುದಕ್ಕೆ ಬದಲು ಏರಿಸುತ್ತಿದ್ದಾರೆ. ಉದಾಹರಣೆಯಾಗಿ ಹೇಳಬೇಕಾದರೆ ಗೊಬ್ಬರದ ರೇಟನ್ನು ಒಂದಕ್ಕೆರಡರಷ್ಟು ಏರಿಸಿದ್ದಾರೆ. ಇದೇ ರೀತಿ ಸಾಗಾಣಿಕೆ ರೇಟನ್ನೂ ಏರಿಸಿದ್ದಾರೆ. ಇದರಿಂದಾಗಿ ರೈತರು ಜಮೀನು ಮಾಡುವಾಗ ಕೂಲಿಗಳಿಗೆ ಬೆಲೆ ಏರಿಸಬೇಕೆಂದು ಅವರು ದವಸದ ಬೆಲೆಯನ್ನೂ ಏರಿಸುತ್ತಿದ್ದಾರೆ. ಇದನ್ನು ಮಾಡಕೂಡದು ಮತ್ತು ಆದಷ್ಟು ಬೆಲೆಯನ್ನು ಕಡಿಮೆ ಮಾಡಲೇ ಬೇಕು ಇದನ್ನು ಯಾವ ರೀತಿ ಮಾಡಲು ಸಾಧ್ಯ ಎನ್ನುವುದನ್ನು ಸರಕಾರ ತೀವ್ರವಾಗಿ ಯೋಚನೆ ಮಾಡಬೇಕು. ಇದಕ್ಕಾಗಿ ನಾನು ಸಲಹೆ ಮಾಡುವುದು ರೈತರಿಗೆ ಯಾವುಥಾದರೂ ಒಂದು ರೀತಿಯಲ್ಲಿ ಸಬ್‌ಸಿಡಿ ರೂಪದಲ್ಲಿ ಸಹಾಯ ಮಾಡಿ ಆಹಾರದ ದಿನಸಿಗಳ ಬೆಲೆಯನ್ನು ಕಡಿಮೆ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಇದಕ್ಕೆ ಬದಲು ಸಂಬಳ ಜಾಸ್ತಿ ಮಾಡುವುದು ಇಲ್ಲವೇ ಸ್ವಲ್ಪ ಡಿಯರನೆಸ್ ಅಲೋಯನ್ಸ್ ಎಂದು ಸರಕಾರದ ನೌಕರರಿಗೆ ಕೊಡುವುದರಿಂದ ಬೆಲೆಗಳನ್ನು ಕಡಿಮೆ ಮಾಡಲಾಗುವುದಿಲ್ಲ. ಇದರಿಂದ ಬೆಲೆಗಳೂ ಇನ್ನೂ ಹೆಚ್ಚಲು ಕಾರಣವಾಗುತ್ತದೆ. ಸರಕಾರ ಮೊದಲು ಪೆಟ್ರೋಲು ಬೆಲೆಯನ್ನು ಎಂಟು ಪೈಸೆ ಹೆಚ್ಚು ಮಾಡುತ್ತೇವೆಂದು ಹೇಳಿದರು. ಇದರ ಜೊತೆಗೆ ನಮ್ಮ ಸರಕಾರ ಮತ್ತೆ ಒಂದು ರೂಪಾಯಿ ತೆರಿಗೆ ಹಾಕಿದರು. ಇದರಿಂದಾಗಿ ಪೆಟ್ರೋಲು ಹಾಗೂ ಇನ್ನಿತರ ಎಣ್ಣೆ ಬೆಲೆಗಳು ಹೆಚ್ಚಾಗಲು ಕಾರಣವಾಯಿತು. ಸರಕಾರ ಲೆವಿ ರೂಪದಲ್ಲಿ ಹೆಚ್ಚು ಧಾನ್ಯವನ್ನು ಶೇಖರಣೆ ಮಾಡಿರುವಾಗ ಇದಕ್ಕೆ ಶೇಕಡಾ ಹತ್ತರಷ್ಟು ಸಾಗಾಣಿಕೆ ಖರ್ಚು ಎಂದು ಸೇರಿಸಬಹುದು. ಆದರೆ ಇದು ಸರಿಯಲ್ಲ ಎಂದು ಶೇಕಡಾ 35 ರಿಂದ 40 ರಷ್ಟು ಬೆಲೆ ಹೆಚ್ಚು ಮಾಡಿ ಇಂದು ರೇಷನ್ ಅಂಗಡಿಗಳಲ್ಲಿ ಬಹು ಅವ್ಯವಸ್ಥೆಗಳಾಗುತ್ತಿವೆ. ಹಿಂದೆ ಒಂದು ಕೆ. ಜಿ. ಅಕ್ಕಿಗೆ 1-50 ರಂತೆ ಮಾರುತ್ತಿದ್ದುದನ್ನು ಇಂದು 1-80 ರಂತೆ ಏರಿಸಿ ಮಾರುತ್ತಿದ್ದಾರೆ. ಅದೂಕೂಡ ಕೊಡುವ ಅಕ್ಕಿ ಕೂಡ ಒಳ್ಳೆಯ ಅಕ್ಕಿಯಲ್ಲ. ಹಿಂದೆ ಆನೆಗೆ ತಿನ್ನಲು ಅಕ್ಕಿ ಕೊಡುತ್ತಿದ್ದರು. ಅಂತಹ ಅಕ್ಕಿಯನ್ನು ಇಂದು ರೇಷನ್ ಡಿಪೋಗಳ ಮೂಲಕ ಕೊಡುತ್ತಿದ್ದಾರೆ. ಒಂದು ಕಡೆ ರೈತರನ್ನು ಶೋಷಣೆ ಮಾಡುತ್ತಾರೆ ಇನ್ನೊಂದು ಕಡೆ ಬಡ ಜನರ ಮೇಲೆ ಹೆಚ್ಚು ತೆರಿಗೆ ಹಾಕುತ್ತಿದ್ದಾರೆ. ಇದರಿಂದ ಜನರು ಬದುಕಲು ಸಾಧ್ಯವಿಲ್ಲದಂತಾಗಿದೆ. ಇದರ ಬಗ್ಗೆ ಸರಕಾರ ಶೀಘ್ರವಾದ ಕಾರ್ಯಕ್ರಮ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಇದನ್ನು ಮುಂದೆ ಎಂದಿಗೂ ಪರಿಹಾರ ಮಾಡಲು ಸಾಧ್ಯವಿಲ್ಲದೇ ಹೋಗುತ್ತದೆ. ಇಂದು ಜನ ವ್ಯಾಪಾರ ಮಾಡಲು ಸಾಲ ತೆಗೆದುಕೊಳ್ಳೋಣ ಎಂದರೆ ಬಡ್ಡಿಯ ದರ ಶೇಕಡಾ 18 ರಿಂದ ಇಪ್ಪತ್ತರವರೆಗೆ ಇರುವುದರಿಂದ ಯಾರೂ ಸಾಲ ಮಾಡಿ ಅವರ ವ್ಯಾಪಾರಗಳನ್ನು ನಡೆಸಲು ಸಾಧ್ಯವಿಲ್ಲದಂತಾಗಿದೆ. ಇದರ ಬಗ್ಗೆ ಸರಕಾರ ವಿಚಾರ ಮಾಡಬೇಕು.

ಇನ್ನು ನನ್ನ ತಿದ್ದುಪಡಿಯಲ್ಲಿತಂದಿರುವ ಎರಡು ಮೂರು ಮುಖ್ಯ ವಿಚಾರಗಳನ್ನು ಮಾತ್ರ ಇಲ್ಲಿ ಸರಕಾರದ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಮೊದಲನೇದು ನಮ್ಮ ರಾಜ್ಯದಲ್ಲಿ ಪಾನ ನಿರೋಧ ಜಾರಿಗೆ ತರಬೇಕು ಎಂದು. ಹಿಂದೆ ಒಂದು ಸಾರಿ ಇದನ್ನು ಜಾರಿಗೆ ತಂದಿದ್ದರು.

** Bill appended as Annexure to this volume.

ಇದನ್ನು ತೆಗೆದು ಹಾಕಿರುವುದು ಸರಿಯಲ್ಲ ಎಂದು ಮತ್ತೆ ಇದನ್ನು ಜಾರಿಗೆ ತರಬೇಂದು ಜನರು ಒತ್ತಾಯ ಮಾಡುತ್ತಿದ್ದಾರೆ. ಸರಕಾರ ಇದನ್ನು ಜಾರಿಗೆ ತಂದರೆ ಅವರಿಗೆ ಬರುವ ಸುಮಾರು 35-36 ಕೋಟಿ ರೂಪಾಯಿ ವರಮಾನ ಹೋಗುತ್ತದೆ ಎಂದು ಹೇಳುತ್ತಾರೆ. ಆದರೆ ನಮ್ಮ ಪಕ್ಷದ ತಮಿಳುನಾಡಿನಲ್ಲಿ ಇಷ್ಟು ವರಮಾನ ಬರುತ್ತಿದ್ದರೂ ಅವರು ಹೇಗೆ ಪಾನ ನಿರೋಧವನ್ನು ಅಲ್ಲಿ ಜಾರಿಗೆ ತಂದಿದ್ದಾರೆ ಎನ್ನುವುದನ್ನು ನಮ್ಮ ಸರಕಾರದವರು ಪರಿಶೀಲನೆ ಮಾಡಿ ಏಕೆ ಇಲ್ಲೂ ಪಾನ ನಿರೋಧ ಜಾರಿಗೆ ತರಬಾರದು ? ಪಾನ ನಿರೋಧ ಜಾರಿಗೆ ತರದೇ ಇರುವುದರಿಂದಾಗಿ ಎಷ್ಟು ಬಡ ಸಂಸಾರಗಳು ಹಾಳಾಗಿ ಹೋಗುತ್ತಿವೆ ಎನ್ನುವುದನ್ನು ಸರಕಾರದವರು ಆಲೋಚನೆ ಮಾಡಿದ್ದಾರೆಯೇ ?

ಇದರಲ್ಲೂ ಹೆಂಡದ ಅಂಗಡಿಗಳನ್ನು ಹರಿಜನರ ಕೇರಿಯ ಹತ್ತಿರ ಹಾಗೂ ದೇವಸ್ಥಾನಗಳ ಹತ್ತಿರ ತೆರೆಯುತ್ತಿದ್ದಾರೆ. ಈಚೆಗೆ ಸರಕಾರದವರು ಒಂದು ಆಜ್ಞೆ ಹೊರಡಿಸಿ ಇನ್ನು ಮುಂದೆ ಹೆಂಡದ ಅಂಗಡಿಗಳನ್ನು ದೇವಸ್ಥಾನಗಳ ಬಳಿ ಹಾಗೂ ಹರಿಜನರ ಕೇರಿಗಳ ಬಳಿ ತೆರೆಯದೇ ಊರಿಂದ ದೂರವಾಗಿ ಇಡಬೇಕೆಂದು ಮಾಡಿದ್ದರು. ಆದರೂ ಸರಕಾರದ ಆದೇಶವನ್ನು ಉಲ್ಲಂಘನೆ ಮಾಡಿ ಹೆಂಡದಂಗಡಿಗಳನ್ನು ದೇವಸ್ಥಾನದ ಸಮೀಪದಲ್ಲಿ ಹಾಗೂ ಜನರು ವಾಸ ಮಾಡುವ ಸ್ಥಳಗಳಲ್ಲೇ ತೆರೆಯಲು ಪ್ರಯತ್ನ ಮಾಡುತ್ತಿದ್ದಾರೆ. ಉದಾಹರಣೆಯಾಗಿ ಹೇಳಬೇಕಾದರೆ ಬೆಂಗಳೂರು ನಗರದ ರಾಯನ್ ರೋಡಿನಲ್ಲಿ ಸುಬ್ರಮಣ್ಯಸ್ವಾಮಿ ದೇವಸ್ಥಾನ ಇದೆ. ಇದರ ಪಕ್ಕದಲ್ಲೇ ಒಂದು ಹೆಂಡದಂಗಡಿಯನ್ನು ತೆರೆಯಲು ಲೈಸನ್ಸು ಕೊಟ್ಟಿದ್ದಾರೆ. ನಮ್ಮ ಜನರು ದೇವಸ್ಥಾನಕ್ಕೆ ಬರುವವರಿಗೆ, ಹಣ್ಣು ಕಾಯಿ ವ್ಯಾಪಾರ ಮಾಡುವವರಿಗೆ ಅವಕಾಶ ಕೊಡದೆ ಇಂತಹ ಹೆಂಡದ ಅಂಗಡಿಗಳಿಗೆ ಇಲ್ಲಿ ಅವಕಾಶ ಮಾಡಿಕೊಡುವುದು ಸರಿಯೇ ಎಂದು ಕೇಳುತ್ತಾರೆ. ಸರಕಾರ ಇನ್ನು ಮುಂದಾದರೂ ಕಟ್ಟುನಿಟ್ಟಾಗಿ ಯಾವ ದೇವಸ್ಥಾನದ ಪಕ್ಕದಲ್ಲೂ ಹೆಂಡದಂಗಡಿ ತೆರೆಯ ಕೂಡದು ಎಂದು ಕೂಡಲೇ ಆದೇಶ ಕಳುಹಿಸಿ, ಇರುವ ಹೆಂಡದಂಗಡಿಗಳನ್ನು ಬೇರೆ ಕಡೆಗಳಿಗೆ ಸ್ಥಳಾಂತರಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಬಡ ಹೆಂಗಸರಿಗೆ ಹಾಗೂ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಇಂದು ಜಾರಿಗೆ ತಂದಿರುವ ಭೂಸುಧಾರಣೆಯಿಂದ ಬಹಳ ಕಷ್ಟಗಳಾಗುತ್ತಿವೆ. ಇವರಿಗೆ ನ್ಯಾಯವಾಗಿ ಕೊಡಬೇಕಾದ ಭೂಮಿಯನ್ನು ಅವರಿಗೆ ಕೊಡಬಹುದು. ಹಾಗಿಲ್ಲದೇ ಇದ್ದರೆ ಇವರಿಗೆ ಕೊಡುವ ಪರಿಹಾರ ಧನವನ್ನಾದರೂ ಇನ್ನೂ ಹೆಚ್ಚು ಮಾಡಬೇಕು. ಇದು ಹೇಗಿದೆ ಎಂದರೆ ಹಾವನ್ನು ಕೊಂದು ಹದ್ದಿಗೆ ಹಾಕಿದರು ಎನ್ನುವ ರೀತಿಯಂತೆ ಸರಕಾರದ ನೀತಿಯಾಗಿದೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರೂ ಕೂಡ ಇಂತಹ ಬಡ ವಿಧವೆಯರಿಗೆ ಹಾಗೂ ಹೆಣ್ಣು ಮಕ್ಕಳಿಗೆ ಅವರು ನ್ಯಾಯವಾಗಿ ಜೀವನ ನಡೆಸುವುದಕ್ಕೆ ಸಹಾಯ ಮಾಡಬೇಕೆಂದು ಹೇಳುತ್ತಾರೆ. ಇದಕ್ಕಾಗಿ ಇವರಿಗೆ ಕೊಡಬೇಕಾದ ಪರಿಹಾರವನ್ನು ಹೆಚ್ಚಾಗಿ ಕೊಡಬೇಕೆಂದು ಕೇಳುತ್ತೇನೆ. ಸರಕಾರ ಇದನ್ನು ತೀವ್ರವಾಗಿ ಪರಿಶೀಲನೆ ಮಾಡಬೇಕು ಮತ್ತು ಬಡಜನರಲ್ಲಿ ನಂಬಿಕೆ ಬರುವ ರೀತಿಯಲ್ಲಿ ಅವರಿಗೆ ತಕ್ಕ ಬಂದೋಬಸ್ತು ಮಾಡಬೇಕು ಎಂದು ಮತ್ತು ಹೆಂಗಸರ ಹಿತದೃಷ್ಟಿಯಿಂದ ಕಡ್ಡಾಯವಾಗಿ ಭೂಸುಧಾರಣೆಯಲ್ಲಿ ಅನುಕೂಲ ಮಾಡಿಕೊಡಬೇಕೆಂದೂ ಇಲ್ಲಿ ಹೇಳಬೇಕಾಗಿದೆ

ಇಲ್ಲದೇ ಹೋದರೆ ಯಾರದೋ ಒಡವೆಯನ್ನು ಕಿತ್ತು ಯಾರಿಗೋ ಕೊಟ್ಟ ಹಾಗಾಗುತ್ತದೆ. ಒಂದು ವರ್ಗವನ್ನು ಮೇಲಕ್ಕೆತ್ತಿ ಇನ್ನೊಂದು ವರ್ಗವನ್ನು ತುಳಿಯತಕ್ಕದ್ದು ಶ್ರೇಯಸ್ಕರವಲ್ಲ. ಅನೇಕ ಸಂದರ್ಭಗಳಲ್ಲಿ ಸರ್ಕಾರದವರು ತಮ್ಮಲ್ಲಿ ಕೆಲಸಮಾಡತಕ್ಕ ಕೆಲಸಗಾರರಿಗೆ ಸಂಬಳ ಸಾರಿಗೆಯನ್ನು ಹೆಚ್ಚು ಮಾಡುವಾಗ ಹಿಂದೆ ಸರ್ಕಾರಕ್ಕೆ ಸೇವೆ ಸಲ್ಲಿಸಿ ನಿವೃತ್ತರಾಗಿರತಕ್ಕ ಪೆನ್ಷನರ್ಸ್‌ಗೆ ಯಾವ ಒಂದು ರೀತಿಯ ಸೌಲಭ್ಯವನ್ನೂ ಕೊಟ್ಟಿಲ್ಲ. ಇದರಿಂದ ಅನೇಕ ವಯಸ್ಸಾದ ನಿವೃತ್ತ ನೌಕರರು ಪೆನ್‌ಷನ'ರ್ಸ್ ಈ ಪರಿಹಾರ ಧನಗಳ ಬೆಲೆ ಏರಿಕೆಯಿಂದಾಗಿ ಬಹಳ ಕಷ್ಟಪಡುತ್ತಿದ್ದಾರೆ. ಆದ್ದರಿಂದ ಈ ಬಜೆಟ್ಟಿನಲ್ಲಿ ಆದರೂ ಆ ಪೆನ್‌ಷನ'ರ್ಸ್‌ಗೆ ಸ್ವಲ್ಪ ಹೆಚ್ಚಿನ ಅನುಕೂಲ ಮಾಡಿಕೊಡದಿದ್ದರೆ ಹಿಂದೆ ಸರ್ಕಾರಕ್ಕೆ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಪೆನ್‌ಷನ'ರ್ಸ್ ಬಹಳ ಕಷ್ಟಪಡಬೇಕಾದ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಹಿಂದೆ ಸರ್ಕಾರಕ್ಕೆ ಸೇವೆ ಸಲ್ಲಿಸಿರುವವರಿಗೂ ಮತ್ತು ಈಗ ಸೇವೆ ಸಲ್ಲಿಸುತ್ತಿರುವ ಸರ್ಕಾರಿ ನೌಕರರಿಗೂ ಸರಿಯಾದ ರೀತಿಯಲ್ಲಿ ತುಟ್ಟಿಭತ್ಯವನ್ನಾಗಲೀ, ಸಂಬಳ ಸಾರಿಗೆಯನ್ನಾಗಲೀ ಹೆಚ್ಚು ಮಾಡಿ ಅವರಿಗೆ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ.

12 Noon

ಅನೇಕ ಸಂದರ್ಭಗಳಲ್ಲಿ ಆಹಾರದ ಅಭಾವ ಉಂಟಾದಾಗ ಬೆಲೆಯು ಏರಿಕೆಯೂ ಆಗಿದೆ. ಇದರ ಜೊತೆಗೆ ಔಷಧಿಗಳೂ ಸರಿಯಾಗಿ ಸಿಕ್ಕುತ್ತಿಲ್ಲ. ಮತ್ತು ಔಷಧಿಗಳ ಬೆಲೆಗಳೂ ಹೆಚ್ಚಾಗಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಯೋಚನೆ ಮಾಡಿ ಸಾಧ್ಯವಾದಷ್ಟು ಔಷಧಿಗಳನ್ನು ಕಡಿಮೆ ದರದಲ್ಲಿ ಜನಗಳಿಗೆ ಒದಗಿಸುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ಸರ್ಕಾರದವರು ಔಷಧಿಗಳನ್ನು ತಯಾರುವ ಕೆಲಸವುದಕ್ಕೆ ಏತಕ್ಕೆ ಕೈಹಾಕಲಿಲ್ಲ ? ಈಗ ನಕಲಿ ಔಷಧಿಗಳು ಬೇರೆ ಬಂದಿವೆ. ಇದರಿಂದ ಜನಗಳಿಗೆ ತೊಂದರೆಯಾಗುತ್ತದೆ. ಕೆಲವು ಮುಖ್ಯ ಔಷಧಿಗಳನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆಗೆ ಕೊಂಡು ಕೊಳ್ಳಬೇಕಾದಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ಒಳ್ಳೆಯ ಔಷಧಿ ಸರಿಯಾದ ರೀತಿಯಲ್ಲಿ ಜನಗಳಿಗೆ ಸಿಕ್ಕುವ ಹಾಗೆ ಏರ್ಪಾಡು ಮಾಡಬೇಕು.

ಕನ್ನಡ ಅಭಿವೃದ್ಧಿಯ ಬಗ್ಗೆ ನಾನು ಇಷ್ಟು ಮಾತ್ರ ಹೇಳುತ್ತೇನೆ. ಕನ್ನಡ ಭಾಷಾ ಅಭಿವೃದ್ಧಿಯ ಬಗ್ಗೆ ದುಡ್ಡು ಖರ್ಚುಮಾಡಿದರೂ ಕೂಡ ಆಡಳಿತ ನಡೆಸತಕ್ಕ ಅಧಿಕಾರಿಗಳ ಮನೋಭಾವ ಬದಲಾವಣೆಯಾಗುತ್ತಾ ಇಲ್ಲ. ಎಲ್ಲಿಯವರೆಗೆ ಆಡಳಿತವನ್ನು ನಡೆಸತಕ್ಕ ಅಧಿಕಾರಿಗಳಿಗೆ ಇದರಲ್ಲಿ ಆಸಕ್ತಿ ತೋರಿಸುವುದಿಲ್ಲ ಅಲ್ಲಿಯವರೆಗೆ ಖಂಡಿತ ಕನ್ನಡದ ಬಗ್ಗೆ ಒಂದು ಹೆಚ್ಚಿನ ಪರಿಶ್ರಮ ಆಗುವುದಿಲ್ಲ. ಈಗ ಮುಖ್ಯವಾಗಿ ಕನ್ನಡ ಟೈಪ್‌ರೈಟರ್ಸ್ ಸಿಕ್ಕುತ್ತಾ ಇಲ್ಲ. ಸರ್ಕಾರದವರು ಯಾವುದಾದರೂ ಒಂದು ಒಳ್ಳೆಯ ಕಂಪೆನಿಯ ಜೊತೆಯಲ್ಲಿ ಕೊಲ್ಯಾಬರೇಷನ್ ಮಾಡಿಕೊಂಡು ಕನ್ನಡ ಟೈಪ್‌ರೈಟರನ್ನು ತಯಾರು ಮಾಡುವುದಕ್ಕೆ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡಬಾರದು ? ವಾಣಿಜ್ಯ ಶಾಲೆಯನ್ನು ನಡೆಸತಕ್ಕವರಿಗೂ ಸಹ ಕನ್ನಡ ಟೈಪ್‌ರೈಟರು ಸಿಕ್ಕುವುದು ಕಷ್ಟವಾಗಿದೆ. ರಿಯಾಯಿತಿ ದರದಲ್ಲಿ ಕನ್ನಡ ಟೈಪ್‌ರೈಟರ್‌ಗಳನ್ನು ಒದಗಿಸುವುದಕ್ಕೆ ಸರ್ಕಾರದವರು ಕಾರ್ಯಕ್ರಮವನ್ನು ಕೈಗೊಳ್ಳದೇ ಹೋದರೆ, ಎಲ್ಲಾ ಆಫೀಸುಗಳಿಗೂ ಕನ್ನಡ ಟೈಪ್‌ರೈಟರ್‌ಗಳನ್ನು ಒದಗಿಸಿ ಕನ್ನಡವನ್ನು ಆಡಳಿತ ಭಾಷೆಯಾಗಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಮತ್ತು ತಡವಾಗುತ್ತದೆ. ಸರ್ಕಾರದವರು ಜನಗಳ ಹಿತದೃಷ್ಟಿಯಿಂದ ಕೆಲಸ ಮಾಡಬೇಕೆಂದು ಸ್ವಲ್ಪವಾದರೂ ಮನಸ್ಸಿದ್ದರೆ ಆಹಾರ ವಸ್ತುಗಳ ಸರಿಯಾಗಿ ನ್ಯಾಯವಾದ ಬೆಲೆಗೆ ಜನಗಳಿಗೆ ಒದಗಿಸುವುದಕ್ಕೆ ಏರ್ಪಾಟು ಮಾಡದಿದ್ದರೆ ಜನಗಳು ಕಷ್ಟಕ್ಕೆ ಈಡಾಗುತ್ತಾರೆ ಎಂದು ಹೇಳಿ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ.ಬಿ. ರಾಮಸ್ವಾಮಿ (ಆನೇಕಲ್).– ಸನ್ಮಾನ್ಯ ಅಧ್ಯಕ್ಷಣಿಯವರೇ ಫೆಬ್ರವರಿ 10ನೇ ತಾರಿಖು ವಿಧಾನಮಂಡಲದ ಸದಸ್ಯರನ್ನುದ್ದೇಶಿಸಿ ಮಾನ್ಯ ರಾಜ್ಯಪಾಲರು ದಯಪಾಲಿಸಿದ ಭಾಷಣಕ್ಕೆ ವಂದನಾರ್ಪಣೆ ಸಲ್ಲಿಸುತ್ತಾ ನಾನು ಕೆಲವು ವಿಷಯಗಳನ್ನು ಇಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಮೊದಲನೆಯದಾಗಿ ಭೂಸುಧಾರಣ ಕಾನೂನು 1-3-1974 ರಂದು ಜಾರಿಗೆ ಬಂದ ಮೇಲೆ ಬಡವರಿಗೆ, ನಿರ್ಗತಿಕರಿಗೆ ಮತ್ತು ಅಲ್ಪಸಂಖ್ಯಾತರಿಗೆ ಅನೇಕರೀತಿಯಲ್ಲಿ ಭೂಸುಧಾರಣೆ ಸಹಾಯವಾಗುತ್ತದೆ ಎಂದು ಬಹಳ ಆಶೆ ಆಕಾಂಕ್ಷೆಯಿಂದ ಜನಗಳು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದಾದು ತಮಗೆ ಗೊತ್ತಿದೆ. ಯಾರು ಜಮೀನು ಹಿಡುವಳಿದಾರರಾಗಿ ಕೆಲಸ ಮಾಡುತ್ತಿದ್ದರು ಗೇಣಿದಾರರಾಗಿ ಕೆಲಸ ಮಾಡುತ್ತಿದ್ದರು ಅವರು 31ನೇ ತಾರೀಖಿನೊಳಗಾಗಿ (31-12-1974 ಒಳಗೆ) ಡಿಕ್ಲರೇಷನ್ ಕೊಡಬೇಕು ಎಂದು ಸರ್ಕಾರದ ಆಜ್ಞೆಯಾಗಿದೆ. ಆ ಆಜ್ಞೆಯ ಪ್ರಕಾರ ಅನೇಕ ಜನ ಬಡವರು, ಗ್ರಾಮಾಂತರ ಪ್ರದೇಶದಲ್ಲಿ ಜೀವನ ಮಾಡತಕ್ಕ ಜನ ಅದರಲ್ಲೂ ಹರಿಜನ ಗಿರಿಜನರು ಸರ್ಕಾರದವರು ನಿಗದಿಪಡಿಸಿರತಕ್ಕ ಅವಧಿಯೊಳಗೆ ಡಿಕ್ಲರೇಷನ್ ಹಾಕಿಲ್ಲ. ಅವರು ಡಿಕ್ಲರೇಷನ್ ಹಾಕುವುದಕ್ಕೆ ಅವಕಾಶವಾಗಿಲ್ಲ. ಆದ್ದರಿಂದ ಡಿಕ್ಲರೇಷನ್ ಕೊಡುವುದಕ್ಕೆ ಸರ್ಕಾರದವರು ಏನು ಒಂದು ಪರಿಮಿತಿ ಹಾಕಿದ್ದಾರೆ ಆ ಪರಿಮಿತಿಯನ್ನು ಸ್ವಲ್ಪ ಸಡಿಲ ಮಾಡಬೇಕು. ಆ ರೀತಿ ಅದನ್ನು ಸಡಿಲ ಮಾಡುವುದಾದರೆ ಹೆಚ್ಚಿನ ರೀತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಬಡವರು ಅನೇಕ ಜನ ಗೇಣಿದಾರರು ಡಿಕ್ಲರೇಷನ್ ಹಾಕುವುದಕ್ಕೆ ಅವಕಾಶವಾಗುತ್ತದೆ ಎಂದು ನಾನು ಒತ್ತಾಯ ಪೂರ್ವಕವಾಗಿ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಗೇಣಿದಾರರ ತೊಂದರೆಯನ್ನು ಹೇಳುವುದಾದರೆ ಗ್ರಾಮಲೆಕ್ಕಿಗರು ಪ್ರತಿದಿವಸ ಯಾವ ಮನುಷ್ಯ ಗೇಣಿದಾರನಾಗಿದ್ದಾನೆ ಅವನ ವಿರುದ್ಧ ಪಹಣಿ ಬರೆಯುವುದಕ್ಕೆ ಹತ್ತಿದ್ದಾನೆ. ಇದಕ್ಕೆ ಕೆಲವು ಬಂಡವಾಳಶಾಹಿಗಳು, ರೀಆಕ್ಷನರಿಗಳು ಅವರಿಗೆ ಸಹಾಯ ಮಾಡಿದ್ದಾರೆ ಇದಕ್ಕೆ ಅನೇಕ ಜನ ಪೋಲೀಸ್ ಅಧಿಕಾರಿಗಳು ಸಾಬೀತಾಗಿದ್ದಾರೆ. ಪೋಲೀಸಿನವರು ಮತ್ತು ಕೆಲವು ಅಧಿಕಾರಿಗಳ ಪ್ರಭಾವದಿಂದ ಭೂಸುಧಾರಣೆ ಕಾನೂನಿನಿಂದ ಬಡ ಗೇಣಿದಾರರಿಗೆ ನ್ಯಾಯ ದೊರೆಯದೆ ತೊಂದರೆಯಾಗಿವೆ. ಇದರಿಂದ ಬಡಗೇಣಿದಾರನನ್ನು ಶೋಷಣೆ ಮಾಡುತ್ತಿದ್ದಾರೆ.

ಆದ್ದರಿಂದ ಸರ್ಕಾರದವರು ಗ್ರಾಮಲೆಕ್ಕಿಗರು ತಹಶೀಲ್ದಾರರು ಮತ್ತು ಡೆಪ್ಯುಟಿ ಕಮಿಷನರಿಗೆ ಆದೇಶವನ್ನು ಕೊಟ್ಟು ಯಾವ ಯಾವ ಮನುಷ್ಯ ಗೇಣಿದಾರ ನಿಜವಾಗಿ ಯಾವ ಯಾವ ಭೂಮಿಯನ್ನು ಸಾಗುಮಾಡುತ್ತಿದ್ದಾನೆಯೋ ಅವನ ಹೆಸರಿಗೇ ಪಹಣಿಯನ್ನು ಬರೆಯಬೇಕೆಂದು ಸರ್ಕಾರದವರು ಆಜ್ಞೆ ಮಾಡಬೇಕೆಂದು ನಾನು ಹೇಳುತ್ತೇನೆ.

ಎರಡನೆಯದಾಗಿ ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಅನೇಕ ಕೆಲಸಗಳು ಸಾಧನೆಯಾಗಿವೆ. 28-30 ವರ್ಷಗಳಿಂದ ಸಾಧನೆಯಾಗದೆ ಇರತಕ್ಕ ಕೆಲಸಗಳನ್ನು ನಮ್ಮ ಸರ್ಕಾರದವರು ಸಾಧನೆ ಮಾಡಿದ್ದಾರೆ ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ ಸುಮಾರು ಲಕ್ಷಾಂತರ ರೂಪಾಯಿ ಬೆಲೆಬಾಳುವ ದವಸಧಾನ್ಯವನ್ನು ಕಳ್ಳಸಾಗಾಣಿಕೆದಾರರು, ಮತ್ತು ಹೋರ್ಡರ್ಸ್ ಏನಿದ್ದಾರೆ ಅವರು ದಾಸ್ತಾನುಮಾಡಿ ತಮಿಳುನಾಡು ಮತ್ತು ಇತರ ರಾಜ್ಯಗಳಿಗೆ ಕಳುಹಿಸುತ್ತಿದ್ದರು. ನಮ್ಮ ಸರ್ಕಾರದವರು 10-12 ಕಡೆ ಚೆಕ್‌ಪೋಸ್ಟ್‌ಗಳನ್ನು ಮಾಡಿ ಅಲ್ಲಿ ಕಳ್ಳಸಾಗಾಣಿಕೆ ಮಾಡುತ್ತಿದ್ದ ಬತ್ತ ಮತ್ತು ಅಕ್ಕಿಯನ್ನು ಹಿಡಿದು ದಾಸ್ತಾನುಮಾಡಿ ಇಟ್ಟಿದ್ದಾರೆ. ಕಳ್ಳಸಾಗಾಣಿಕೆದಾರರನ್ನು ಹಿಡಿದು ಹತೋಟಿಯಲ್ಲಿ ಇಟ್ಟಿದ್ದರಿಂದ ಆ ದಾಸ್ತಾನು ಸಂಪೂರ್ಣವಾಗಿ ಬಡವರಿಗೆ ದೊರೆಯುತ್ತಿದೆ. ತಮಿಳುನಾಡಿನಲ್ಲಿ ಡಿ. ಎಂ. ಕೆ. ಸರ್ಕಾರದ ಅಸ್ತಿತ್ವಕ್ಕೆ ಬಂದ ಮೇಲೆ ಅಲ್ಲಿನ ಮುಖ್ಯಮಂತ್ರಿಗಳು ಒಂದು ರೂಪಾಯಿಗೆ ಒಂದು ಪಡಿ ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿದರು. ಆದರೆ ಇವೊತ್ತು ತಮಿಳುನಾಡಿನಲ್ಲಿ ಒಂದು ಕೆ. ಜಿ. ಅಕ್ಕಿಯ ಬೆಲೆ 6 ರೂಪಾಯಿಯಿಂದ 9 ರೂಪಾಯಿಗಳವರೆಗೂ ಏರಿದೆ. ಆದರೆ ನಮ್ಮ ಸರ್ಕಾರ ಕರ್ನಾಟಕ ರಾಜ್ಯದಲ್ಲಿ ಒಂದು ಕೆ. ಜಿ. ಅಕ್ಕಿಗೆ 3 ರೂಪಾಯಿಗಳಿಗಿಂತಲೂ ಹೆಚ್ಚು ಇಲ್ಲ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಸಮಾಜವಾದವನ್ನು ರಚನೆ ಮಾಡತಕ್ಕ ಕಾಲದಲ್ಲಿ ಚುನಾವಣೆಯ ಕಾಲದಲ್ಲಿ ಘೋಷಣೆ ಮಾಡಿ ಜನಗಳಿಗೆ ಬಡಜನಗಳಿಗೆ ಏನು ಆಶ್ವಾಸನೆಯನ್ನು ಕೊಟ್ಟು ಬಂದಿದ್ದೇವೋ ಅದೇ ರೀತಿ ಆಶ್ವಾಸನೆಯನ್ನು ನೆರವೇರಿಸಿ ಸುಲಭವಾಗಿ ಜನಗಳಿಗೆ ಆಹಾರ ದೊರೆಯಬೇಕು. ಈ ದೃಷ್ಟಿಯಿಂದ ಸರ್ಕಾರದಲ್ಲಿ ಅಧಿಕಾರಿಗಳ ಬಗ್ಗೆ ಹೆಚ್ಚಿನ ರೀತಿಯಲ್ಲಿ ಹತೋಟಿಯನ್ನು ಇಟ್ಟುಕೊಳ್ಳಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಆಹಾರಧಾನ್ಯದ ವಿತರಣೆಯು ಸರಿಯಾಗಿಲ್ಲ ಎಂದು ದೂರುಗಳು ಬಂದಿವೆ. ಈಗ ಉದಾಹರಣೆಗೆ ಹೇಳುವುದಾದರೆ ನನ್ನ ಕ್ಷೇತ್ರದಲ್ಲಿ ಸುಮಾರು 36ಜನ ವಿ.ಪಿ. ಚೇರ್ಮನ್‌ಗಳು ಆಹಾರದಧಾನ್ಯವನ್ನು ದುರುಪಯೋಗ ಮಾಡಿ ದಬ್ಬಾಳಿಕೆಯನ್ನು ನಡೆಸುತ್ತಿದ್ದರು. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಅವರ ಮೇಲೆ ಕ್ರಮತೆಗೆದುಕೊಂಡು ಅವರು ಮನೆಗೆ ಹೋಗುವುದಕ್ಕೆ ಅವಕಾಶವಾಯಿತು. ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಶ್ರೀಮಾನ್ ರಾಚಯ್ಯನವರು ನಮ್ಮ ಆನೇಕಲ್ ತಾಲ್ಲೂಕಿಗೆ ಗ್ರಾಮಾಂತರ ಪ್ರದೇಶಕ್ಕೆ ಅನೇಕ ರೀತಿಯಲ್ಲಿ ನೆರವು ನೀಡಿದ್ದಾರೆ. ಆದಕ್ಕಾಗಿ ನಾನು ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

ಈಗ ನಮ್ಮ ದೇಶದಲ್ಲಿ 4ನೇ ಪಂಚವಾರ್ಷಿಕ ಯೋಜನೆ ಮುಗಿದು ನಾವು 5ನೇ ಪಂಚವಾರ್ಷಿಕ ಯೋಜನೆಗೆ ಕಾಲಿಟ್ಟಿದ್ದೇವೆ. ಆದರೂ ಸಹ ತಾಲ್ಲೂಕು ಮಟ್ಟದಲ್ಲಿ ಯೋಜನೆಯನ್ನು ತಯಾರು ಮಾಡುವುದನ್ನು ನಾವು ಮರೆತಿದ್ದೇವೆ. ತಾಲ್ಲೂಕು ಮಟ್ಟದಲ್ಲಿ ಗ್ರಾಮಾಂತರ ಪ್ರದೇಶಗಳ ಬಗ್ಗೆ ಎಲ್ಲಾ ತುಲನಾತ್ಮಕವಾಗಿ ವಿಚಾರ ಮಾಡಿ ಅಲ್ಲಿ ಹರಿಜನ ಗಿರಿಜನರಿಗೆ ದುರ್ಬಲವರ್ಗದವರಿಗೆ ಬಡವರಿಗೆ ಏನು ಕಷ್ಟ ಇದೆ ಅದನ್ನೂ ಸಹ ಚಿಂತನೆ ಮಾಡಿ ಅದನ್ನು ಹೋಗಲಾಡಿಸತಕ್ಕ ರೀತಿಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕುಳಿತುಕೊಂಡು ಯೋಜನೆಯನ್ನು ತಯಾರುಮಾಡಬೇಕು. ಕೆಲವು ಅಧಿಕಾರಿಗಳು ಯೋಜನೆಯ ಬಗ್ಗೆ ಒಂದು ಪಟ್ಟಿ ಮಾಡಿ ನೇರವಾಗಿ ರಾಜ್ಯ ಸರ್ಕಾರಕ್ಕಾಗಲೀ ಕೇಂದ್ರ ಸರ್ಕಾರಕ್ಕಾಗಲೀ ಕಳುಹಿಸುವುದು ಸೂಕ್ತವಲ್ಲ ಎಂದು ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆದಷ್ಟು ಗ್ರಾಮಾಂತರ ಪ್ರದೇಶದಲ್ಲಿ ಮುಖಂಡರು ಹಾಗೂ ರಾಜಕೀಯ ಪಕ್ಷಗಳಲ್ಲಿ. ಅರಿತು ನುರಿತಂಥವರೊಡನೆ ವಿಚಾರ ಮಾಡಿ ಯೋಜನೆಯನ್ನು ತಯಾರು ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ವ್ಯವಸಾಯ ಕ್ಷೇತ್ರದಲ್ಲಿ ನಾನು ಒಳ್ಳೆಯ ವಿಷಯಗಳನ್ನು ಪ್ರಸ್ತಾಪಮಾಡಬೇಕೆಂದಿದ್ದೇನೆ. ವ್ಯವಸಾಯದಲ್ಲಿ ತಮಗೆ ಗೊತ್ತಿರುವ ಹಾಗೆ ಹಿಂದೆ ಹರಿಜನ ಗಿರಿಜನರಿಗೆ ವ್ಯವಸಾಯ ಕಾಲೋನಿ ಮಾಡಿ ಅಲ್ಲಿ ಅವರು ನೇರವಾಗಿ ಒಬ್ಬೊಬ್ಬರೂ ಜೀವನಮಾಡುವುದಕ್ಕೆ ಎಲ್ಲ ಸೌಕರ್ಯಗಳನ್ನು ಸರ್ಕಾರ ಒದಗಿಸಬೇಕೆಂದು ಪ್ರತ್ಯೇಕವಾದಂಥ ಕಾನೂನು ಮಾಡಿ ತಕ್ಕ ವ್ಯವಸ್ಥೆ ಮಾಡಿಕೊಟ್ಟಿದ್ದರು. ಆದರೆ ಅದೇಕೋ ನನಗೆ ಅರ್ಥವಾಗುತ್ತಿಲ್ಲ, ಆ ಒಂದು ಕಾನೂನನ್ನು ಸರ್ಕಾರ ವಾಪಸ್ಸು ತಗೆದುಕೊಂಡಿದೆ ಎಂಬುದಾಗಿ ಗೊತ್ತಾಗಿದೆ. ನಾನು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಹರಿಜನರ ಬಗ್ಗೆ ದಬ್ಬಾಳಿಕೆ ಶೋಷಣೆ ಇವು ಎಲ್ಲಾ ಕಡೆಗಳಲ್ಲಿಯೂ ಈಗ ಬೆಳೆಯುತ್ತಿರುವುದರಿಂದ,

ಅವನ್ನು ಸರ್ಕಾರ ತಡೆಗಟ್ಟಿ ಅವರೆಲ್ಲರೂ ಸುಲಭವಾಗಿ ಜೀವನಮಾಡುವುದಕ್ಕೆ ಅನುಕೂಲವಾಗುವಂತೆ ಅವರಿಗೆ ಕಾಲೋನಿಗಳನ್ನು ಮಾಡುವ ವ್ಯವಸ್ಥೆಮಾಡಿ ಹರಿಜನ ಗಿರಿಜನರಿಗೆ ಹೆಚ್ಚಿಗೆ ಸರ್ಕಾರ ನೆರವು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ಅನಿವಾರ್ ಹಸ್ಪೆಂಡ್ರಿ ವಿಷಯ. ಕೆಲವು ಕಡೆಗಳಲ್ಲಿ ಆಸ್ಪತ್ರೆಗಳನ್ನು ತೆಗೆದಿದ್ದಾರೆ. ಅಲ್ಲಿ ಒಬ್ಬ ಜವಾನ್ ಬಿಟ್ಟರೆ ಮತ್ತೆ ಯಾರೂ ಇರುವುದಿಲ್ಲ. ಬೇಕಾದಂಥ ಔಷಧಿಗಳೂ ಸಹ ಇರುವುದಿಲ್ಲ. ಅಲ್ಲಿರುವ ಅಧಿಕಾರಿ ವರ್ಗದವರು ಅಲ್ಲಿರುವ ಔಷಧಿಗಳನ್ನು ಸ್ಟೋರ್ ಮಾಡಿಕೊಂಡು ಹೊರಗಡೆ ಅಂಗಡಿಗಳಲ್ಲಿ ಅವನ್ನು ಮಾರಾಟ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ಸೂಕ್ತ ಆದೇಶಗಳನ್ನು ಕೊಡಬೇಕು. ಆದ್ದರಿಂದ ಪ್ರತಿಯೊಂದು ಆಸ್ಪತ್ರೆಗೆ ಎಷ್ಟು ಔಷಧಿಗಳನ್ನು ಕೊಡುತ್ತಾರೋ ಅವುಗಳ ವಿತರಣೆಯ ಬಗ್ಗೆ ಒಂದು ರಿಪೋರ್ಟನ್ನು ತರಿಸಿಕೊಂಡು ವಿಚಾರಣೆ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಅಲ್ಲಿನ ಅಧಿಕಾರವರ್ಗದವರಿಗೆ ಇದರ ಬಗ್ಗೆ ಸೂಕ್ತ ಆದೇಶಗಳನ್ನು ಸರ್ಕಾರದವರು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊ-ಅಪರೇಟಿವ್ ಇಲಾಖೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಸುಮಾರು 140 ಕೊ- ಅಪರೇಟಿವ್ ಸೊಸೈಟಿಗಳಿವೆ. ಅವುಗಳಲ್ಲಿ ಬಹುಭಾಗ ಬರೀ ಖದೀಮರೇ ಸೇರಿಕೊಂಡಿದ್ದಾರೆ. ಒಂದು ಲಕ್ಷ 44 ಸಾವಿರ ರೂಪಾಯಿಗಳನ್ನು ಕೋ ಆಪರೇಟಿವ್ ಬ್ಯಾಂಕ್‌ಗಳಲ್ಲಿ ಕೂಡಿಸಬೇಕೆಂಬ ಒತ್ತಾಯವನ್ನು ಈಗ ಅವರು ಸರ್ಕಾರಕ್ಕೆ ತೆಗೆದುಕೊಂಡು ಬಂದಿದ್ದಾರೆ. 1972 ರಿಂದ ಮೂರು ವರ್ಷಗಳವರೆಗೆ ಇನ್ನೂ ಅವುಗಳ ಬಗೆ ಇನ್‌ವೆಸ್ಟಿಗೇಷನ್ ನಡೆಯುತ್ತಲೇ ಇದೆ. ಆದ್ದರಿಂದ ಸಹಕಾರ ಸಂಘಗಳ ಬಗ್ಗೆ ಹೆಚ್ಚಿನ ನಿಗಾ ಕೊಟ್ಟು ಅವು ಸರಿಯಾಗಿ ಕೆಲಸ ಮಾಡುತ್ತಿವೆಯೋ ಎಂಬುದನ್ನು ಸರ್ಕಾರದವರು ನೋಡಿಕೊಳ್ಳಬೇಕು. ನಮ್ಮ ಕಡೆ ಒಂದು ಸೊಸೈಟಿಯಲ್ಲಿ ಒಬ್ಬ ಕಾರ್ಯದರ್ಶಿ ಇದ್ದಾನೆ. ಆ ಸೊಸೈಟಿಯಲ್ಲಿ ಕೇವಲ ಸಣ್ಣಪುಟ್ಟ ರೈತರಿಗೆ ಮಾತ್ರ ಸಾಲ ಕೊಡುತ್ತಾರೆ. ಅಂತಹ ಕಡೆಯಲ್ಲಿ 85 ಸಾವಿರ ರೂಪಾಯಿಗಳವರೆಗೆ ಫ್ರಾಡು ಮಾಡಿದ್ದಾರೆ. ಏಕೆಂದರೆ ಅಲ್ಲಿ ದೊಡ್ಡ ದೊಡ್ಡ ರೈತರು ಸೇರಿಕೊಂಡು ಹೆಚ್ಚಿಗೆ ದುರ್ವ್ಯವಹಾರ ನಡೆಯುತ್ತಾ ಇದೆ. ಅಲ್ಲಿ ಆಡಿಟ್ ಮಾಡುವುದಕ್ಕೆ ಹೋದಾಗ ಅಲ್ಲಿರುವ ಕಾರ್ಯದರ್ಶಿ ಒಬ್ಬ ಕಾಂಗ್ರೆಸ್ ಕಾರ್ಯಕರ್ತನ ಮೇಲೆ ಹಲ್ಲೆ ಮಾಡಿದರು. ಬಹು ಕೆಟ್ಟ ಪದಗಳನ್ನು ಪ್ರಯೋಗ ಮಾಡಿದರು. ಪಾದರಕ್ಷೆಗಳಿಂದ ಹೊಡೆದು ಅವಮಾನ ಮಾಡಿದ್ದಾರೆ. ಆ ಮನುಷ್ಯ ಈಗಲೂ ಕಾಂಗ್ರೆಸ್ಸಿನ ಮೇಲೆ ದೂರು ಕೊಟ್ಟು, ಪೋಲಿಸಿನವರಿಗೆ ದೂರ ಕೊಟ್ಟು 14 ಸಾವಿರ ರೂಪಾಯಿಗಳು ಕಳುವು ಆಗಿದೆಯೆಂದು ಹೇಳಿದ್ದಾನೆ. ಇದರ ಬಗ್ಗೆ ಇದುವರೆಗೂ ತನಿಖೆಯಾಗಿಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಈ ದಿವಸ ಬಡವರು, ದುರ್ಬಲ ವರ್ಗದವರು ಹಾಗೂ ಹರಿಜನ ಗಿರಿಜನರು ಸರ್ಕಾರದಿಂದ ಒಳ್ಳೆಯದನ್ನೇ ನಿರೀಕ್ಷೆ ಮಾಡುತ್ತಿದ್ದಾರೆ. ಸರ್ಕಾರ ಚುನಾವಣೆಯ ಕಾಲದಲ್ಲಿ ಹಿಂದೆ ಅನೇಕ ಘೋಷಣೆಗಳನ್ನು ಮಾಡಿದ್ದಾರೆ. ಎಲ್ಲರೂ ನಾನಾ ರೀತಿಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ನಿರೀಕ್ಷೆ ಮಾಡುತ್ತಿದ್ದಾರೆ. ಆದ್ದರಿಂದ ಸಹಕಾರ ಸಂಘಗಳಲ್ಲಿ ಎಷ್ಟು ಸೌಲಭ್ಯಗಳನ್ನು ಸರ್ಕಾರ ಕೊಡಬೇಕೋ ಅಷ್ಟನ್ನು ಕೊಟ್ಟಿಲ್ಲ. ಅದರ ಕಡೆಗೆ ಹೆಚ್ಚಿನ ಗಮನಕೊಡಬೇಕು.

ಕೊನೆಯದಾಗಿ ಒಂದು ಮಾತು. ಹೆಚ್ಚಿಗೆ ಈ ಸಭೆಯ ಕಾಲಾವಕಾಶವನ್ನು ತೆಗೆದ ಕೊಳ್ಳದೆ ಆಸ್ಪತ್ರೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಕಷ್ಟು ಡಿಸ್‌ಪೆನ್ಸರಿಗಳು ಇಲ್ಲ. ಬೆಂಗಳೂರು ಜಿಲ್ಲೆಯಲ್ಲಿ 14 ತಾಲ್ಲೂಕುಗಳಿವೆ. ಆದರಲ್ಲಿ ಆನೇಕಲ್ ಒಂದು ತಾಲ್ಲೂಕು. ಅಲ್ಲಿ ಕೇವಲ ಎರಡು ಎಲ್. ಎಫ್. ಡಿಸ್‌ಪೆನ್ಸರಿಗಳಿವೆ. ಆದರಲ್ಲಿ ಪಿ. ಎಚ್. ಡಿ. ಸೆಂಟರ್ ಎಂಬುದಾಗಿ ಬಂದಿದೆ. ಸರ್ಕಾರದಿಂದ 3 ಸಾವಿರ ರೂಪಾಯಿಗಳಷ್ಟು ಔಷಧಿಗಳನ್ನು ಆ ಡಿಸ್‌ಪೆನ್ಸರಿಗಳಿಗೆ ಕೊಡುತ್ತಿದ್ದಾರೆ ಇನ್ನು ಕೆಲವು ಸೆಂಟರ್‌ಗಳಿಗೆ 6 ಸಾವಿರ ರೂಪಾಯಿಗಳಷ್ಟು ಔಷಧಿಯನು ಕೊಡುತ್ತಿದ್ದಾರೆ. ಆದರೆ ಆ ಔಷಧಿಗಳನ್ನು ಅಲ್ಲಿರತಕ್ಕ ವೈದ್ಯರುಗಳು ನೇರವಾಗಿ ಮನೆಗೆ ತೆಗೆದುಕೊಂಡು ಹೋಗಿ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ಬಡವರಿಗೆ ಅಲ್ಲಿಗೆ ಹೋದರೆ ಯಾವ ಔಷಧಿಯೂ ಸಿಗದೆ ಪ್ರತಿದಿನವೂ ರೋದನವಾಗಿದೆ. ಆದ್ದರಿಂದ ಹಳ್ಳಿಗಾಡಿನಲ್ಲಿರುವವರು ಅಂತಹ ಆಸ್ಪತ್ರೆಗಳಿಗೆ ಹೋದರೆ ಕಣ್ಣಿನಲ್ಲಿ ನೀರು ಹಾಕುವ ಪರಿಸ್ಥಿತಿ ಬಂದಿದೆ. ಅಲ್ಲಿರುವ ಅಧಿಕಾರವರ್ಗದವರು ಬಡವರಿಗೆ ಕೊಡುವ ಕಷ್ಟ ಬಹಳ ಚಿಂತಾಜನಕವಾಗಿದೆ. ಸರ್ಕಾರದವರು ಈ ಆಸ್ಪತ್ರೆಗಳಿಗೆ ಔಷಧಿಗೆ ಕೊಡುವ ಮೂರು ಸಾವಿರ ರೂಪಾಯಿಗಳು ಏನಿವೆಯೊ ಅವು ಸರಿಯಾಗಿ ಖರ್ಚಾಗಿವೆಯೇ ಇಲ್ಲವೇ ಎಂಬುದನ್ನು ತನಿಖೆ ಮಾಡಬೇಕು. ಎಷ್ಟೆಷ್ಟು ಜನರಿಗೆ ಪ್ರತಿದಿನವೂ ಇಂಜಕ್ಷನ್ ಕೊಟ್ಟಿದ್ದಾರೆಂಬ ಬಗ್ಗೆ ಅಂಕಿಅಂಶಗಳನ್ನು ತರಿಸಿಕೊಂಡು ಸೂಕ್ತ ರೀತಿ

ಯಲ್ಲ ಆಗಾಗ್ಗೆ ತನಿಖೆ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟುಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಹಿಂದ್.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ರಾಜ್ಯಪಾಲರ ಭಾಷಣವನ್ನು ವಂದಿಸುವ ನಿರ್ಣಯವನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣ ಬಹಳ ಚಿಕ್ಕದಾಗಿದ್ದರೂ ಹಾಗೂ ಬಹಳ ಚೊಕ್ಕವಾಗಿದ್ದರೂ ಹಿಂದಿನ ವರ್ಷದಲ್ಲಿ ಸರ್ಕಾರದವರು ಮಾಡಿರುವ ಸಾಧನೆಗಳನ್ನು ಪ್ರಸ್ತಾಪಮಾಡಿದಾರೆ. ಅದೂ ಅಲ್ಲದೆ ಈ ವರ್ಷ ಸರ್ಕಾರದವರು ಏನೇನು ಮಾಡಬೇಕೆಂಬ ಬಗ್ಗೆ ಯೋಜನೆಗಳ ವಿವರಗಳನ್ನು ತಿಳಿಸಿದ್ದಾರೆ ಬಹು ಮುಖ್ಯವಾಗಿ ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ವಿಶೇಷವಾಗಿ ದುರ್ಬಲ ವರ್ಗದವರಿಗೆ ಬಹಳವಾಗಿ ರಕ್ಷಣೆಯನ್ನು ಕೊಟ್ಟಿದ್ದಾರೆ. ಅವರ ಹಿತರಕ್ಷಣೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಿಕ್ಕಿಲ್ಲ. ಈ ಸಂದರ್ಭದಲ್ಲಿ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಲೋಕಸೇವಾ ಆಯೋಗಕ್ಕೆ ಮಾನ್ಯ ಶ್ರೀ ದುಗ್ಗಪ್ಪನವರನ್ನು ಅಧ್ಯಕ್ಷರನ್ನಾಗಿ ನೇಮಕಮಾಡಿರುವುದು ಸರ್ವರೀತಿಯಲ್ಲಿಯೂ ಯೋಗ್ಯವಾಗಿದೆ. ಅವರು ದುರ್ಬಲವರ್ಗಕ್ಕೆ ಸೇರಿದವರೆಂಬುದು ಮಾತ್ರವಲ್ಲ. ಅವರ ಯೋಗ್ಯತೆ ಚೆನ್ನಾಗಿದ್ದುದರಿಂದಲೇ ಅವರು ಎಲ್ಲ ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದುದರಿಂದಲೇ ಅವರು ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಅಧ್ಯಕ್ಷರಾಗಿ ನೇಮಿಸಲ್ಪಟ್ಟಿದ್ದಾರೆ. ಮುಂದೆ ಅಲ್ಲಿನ ಕೆಲಸ ಕಾರ್ಯಗಳು ಯೋಗ್ಯ ರೀತಿಯಲ್ಲಿ ನಡೆಯುವುದಕ್ಕೆ ಹೆಚ್ಚು ಅನುಕೂಲವಾಗುತ್ತದೆಂದು ಸರ್ಕಾರದವರು ಈ ರೀತಿಯಾಗಿ ಅವರನ್ನು ಅಲ್ಲಿಗೆ ನೇಮಿಸಿದ್ದಾರೆ. ಆದ್ದರಿಂದ ಹಿಂದುಳಿದ ವರ್ಗಗಳ ಹಿತರಕ್ಷಣೆಯನ್ನು ಬಹಳ ಚೆನ್ನಾಗಿ ಮಾಡಿದ್ದಾರೆಂದು ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಅಭಿನಂದನೆ ಮಾಡಬೇಕಾಗಿದೆ. ರಾಜ್ಯಪಾಲರು ಅವರ ಭಾಷಣದಲ್ಲಿ ಕೆಲವು ಪ್ರಾಮುಖ್ಯವಾದ ವಿಷಯಗಳ ಮೇಲೆ ಪ್ರಸ್ತಾಪಮಾಡಿದ್ದಾರೆ. 1-3-1974 ರಿಂದ ಗೇಣೀದಾರರಿಗೆ ಮತ್ತು ಜಮೀನ್ದಾರರಿಗೆ ಇದ್ದಂಥ ಸಂಬಂಧ ಕಡಿದುಹೋಗಿದೆ. ಅದರಲ್ಲಿಯೂ ವಿಧವೆಯರ, ಅಂಗವಿಕಲರ, ಹಾಗೂ ಅಪ್ರಾಪ್ತವಯಸ್ಕರ ಜಮೀನುಗಳು ಏನಿವೆಯೋ ಅವನ್ನು ಗೇಣಿಗೆ ಕೊಟ್ಟಿದ್ದರೆ ಆ ಜಮೀನುಗಳನ್ನು ಬಿಡಿಸುವ ಹಕ್ಕನ್ನು ತೆಗೆದುಹಾಕಿದ್ದಾರೆ. ಗೇಣಿ ಜಮೀನನ್ನು ಬಿಡಿಸಿಕೊಳ್ಳುವಂತಿಲ್ಲ. ಆದರೆ ಕೆಲವು ವಿಧವೆಯರು ಗೇಣಿಗೆ ಕೊಡದೆ ಜಮೀನನ್ನು ಸ್ವಂತವಾಗಿ ಜಮೀನು ಮಾಡುತ್ತಿದ್ದಾರೆ. ಆ ರೀತಿ ಅವರು ಮಾಡಿಕೊಂಡು ಹೋಗುವುದಕ್ಕೆ ಯಾವರೀತಿಯಲ್ಲಿಯೂ ತೊಂದರೆ ಇಲ್ಲ. ಬೇರೆಯವರ ಮುಖಾಂತರ ಅವರ ಜಮೀನುಗಳನ್ನು ಮಾಡಿಸುವುದಕ್ಕೆ ಯಾವ ಅಡ್ಡಿ ಆತಂಕವೂ ಇಲ್ಲ. ಆ ರೀತಿ ಮಾಡಿಸುವುದಕ್ಕೆ ಅವಕಾಶವಿದೆ. ಆದರೆ ಕೆಲವು ಕಡೆಗಳಲ್ಲಿ ಪಾರ್ಟಿಗಳು ಇರುವ ಹಳ್ಳಿಗಳಲ್ಲಿ ವಿಧವೆಯರ ಜಮೀನನ್ನು ಅಕ್ರಮವಾಗಿ ಪಡೆದುಕೊಳ್ಳುವ ದುರುದ್ದೇಶದಿಂದ ಡಿಕ್ಲರೇಷನ್ ಗೇಣಿದಾರರು ಅಲ್ಲದವರಿಂದ ಕೊಡಿಸುತ್ತಿದ್ದಾರೆ. ಇದು ಬಹಳ ತಪ್ಪು. ನನ್ನ ಕ್ಷೇತ್ರದಲ್ಲಿಯೇ ವಿಧವೆಯರು ಅನೇಕರು ದೊಡ್ಡ ದೊಡ್ಡ ಎಸ್ಟೇಟ್‌ಗಳನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ ಆದರೆ ಜನಗಳು ತಪ್ಪು ಭಾವನೆಯನ್ನು ಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ವಿಧವೆಯರ ಜಮೀನನ್ನು ಇಟ್ಟುಕೊಂಡು ಸ್ವಂತ ಮಾಡಿಸಿಕೊಳ್ಳುವುದಕ್ಕೆ ಅವಕಾಶವಿದೆ. ಸುಮ್ಮನೆ ಅಂತಹವರ ಜಮೀನುಗಳನ್ನು ಸರ್ಕಾರದವರು ಕಿತ್ತುಕೊಳ್ಳುತ್ತಾರೆಂಬ ವದಂತಿಯನ್ನು ಹುಟ್ಟಿಸಿದ್ದಾರೆ. ಅವರು ತಾವಾಗಿಯೇ ಸ್ವಂತವಾಗಿ ಸಾಗುವಳಿ ಮಾಡುತ್ತಿದ್ದರೆ, ಆ ರೀತಿಯಾಗಿ ಮಾಡಿಕೊಂಡು ಹೋಗುವುದಕ್ಕೆ ಯಾವ ತೊಂದರೆಯೂ ಇಲ್ಲ. ವಿಧವೆಯರು ಯಾರೇ ಆಗಲೀ ಸ್ವಂತವಾಗಿ ಜಮೀನು ಮಾಡುತ್ತಿದ್ದರು ಅಂತಹವರಿಗೆ ಯಾವ ಬಾಧಕವಿಲ್ಲವೆಂದು ದೃಢವಾಗಿ ಸರ್ಕಾರದವರು ತೀರ್ಮಾನಮಾಡಿ ಹೇಳಬೇಕಾಗುತ್ತದೆ.

ಕೆಲವು ಕಡೆ ಡಿಕ್ಲರೇಷನ್ ಕೊಡುವಾಗ ಗೇಣಿದಾರರಲ್ಲದವರು ಸುಳ್ಳು ಡಿಕ್ಲರೇಷನ್ ಕೊಟ್ಟು ಕಿತಾಪತಿ ಮಾಡತಕ್ಕ ಕೆಲಸ ನಡೆಯುತ್ತಿದೆ. ಸಾಕಷ್ಟುಮಟ್ಟಿಗೆ ಟ್ರಿಬ್ಯುನಲ್‌ಗಳು ನ್ಯಾಯ ವಿಮರ್ಶೆಯನ್ನು ಮಾಡಬೇಕಾಗಿದೆ. ಅವರು ಸರಿಯಾದ ರೀತಿಯಲ್ಲಿ ವಿಮರ್ಶಿಸಿ ಯಾವುದು ಸುಳ್ಳು ಯಾವುದು ನಿಜ ಎಂದು ಪರಿಶೀಲನೆ ಮಾಡುತ್ತಾರೆನ್ನುವ ಭರವಸೆ ಇದೆ.

ಋತುಮಾನ ಪರಿಸ್ಥಿತಿಯ ಬಗ್ಗೆ ರಾಜ್ಯಪಾಲರು ಪ್ರಸ್ತಾಪ ಮಾಡಿ ಮೈಸೂರು ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಮಳೆ ಕಡಿಮೆಯಾಗಿದೆ ಎನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ. ಮಳೆ ಹೋಗಿರುವ ಸಂದರ್ಭದಲ್ಲಿ ಅಲ್ಲಿ ತೆಗೆದುಕೊಳ್ಳತಕ್ಕ ಪರಿಹಾರ ಕಾವ ಗಾರಿ ವಿಚಾರವನ್ನು ಪ್ರಸ್ತಾಪ ಮಾಡಿಲ್ಲ. ಹಾಸನ ಜಿಲ್ಲೆಯಲ್ಲಿ ಅದರಲ್ಲೂ ಹೊಳೆನರಸೀಪುರ, ಅರಕಲಗೂಡು, ಹಾಸನ, ಆಲೂರು, ಬೇಲೂರು, ಸಕಲೇಶಪುರದ ಕೆಲವು ಭಾಗಗಳಲ್ಲಿ ಮಳೆ ಕಡಿಮೆಯಾಗಿ ಬತ್ತದ ಬೆಳೆಗೆ ಹಾನಿಯಾಗಿದೆ.

ಇಂಥ ಸಂದರ್ಭದಲ್ಲಿ ಲೆವಿ ವಸೂಲಿಗೆ ರಿಯಾಯಿತಿ ಕೊಡಬೇಕು ಮತ್ತು ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳುವುದಕ್ಕೆ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಳ್ಳಬೇಕು. ಮಲೆ ಸೀಮೆಯಲ್ಲಿ ಈಗಲೇ ಕುಡಿಯುವ ನೀರಿಗೆ ತೊಂದರೆಯಾಗಿದೆ. ಅಲ್ಲಿ ರಿಗ್ ವೆಲ್ಸ್ ಹಾಕುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಆಲೂರು ತಾಲ್ಲೂಕಿನಲ್ಲಿ ವಾಟೆಹೊಳೆ ಪ್ರಾಜೆಕ್ಟನ್ನು ಕಟ್ಟಲು ನಾಲ್ಕು ಕೋಟಿ ರೂಪಾಯಿ ಖರ್ಚಾಗಿ ಅದರಿಂದ 16—20 ಸಾವಿರ ಎಕರೆಗೆ ನೀರಾವರಿ ಅನುಕೂಲವಾಗುತ್ತದೆ. ಇದಕ್ಕೆ ಟೆಕ್ನಿಕಲ್ ಕ್ಲಿಯರೆನ್ಸ್ ಬಂದಿದೆ ಎಂದು ಗೊತ್ತಾಗಿದೆ ಮತ್ತು ಅದರ ಪ್ರಾಜೆಕ್ಟು "ಬ್ಲೂ ಪ್ರಿಂಟ್" ಎಲ್ಲ ಪೂರ್ತಿಯಾಗಿದೆ. ಸರ್ಕಾರದವರು ಈ ಯೋಜನೆಗೆ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಕೊಟ್ಟು ಈ ಕೆಲಸವನ್ನು ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ಬಿನ್ನಹ ಮಾಡಿಕೊಳ್ಳುತ್ತೇನೆ.

ಯೋಜನೆ ಮತ್ತು ನೀರಾವರಿ ವಿಚಾರಗಳಿಗೆ ಆದ್ಯತೆ ಕೊಡತಕ್ಕ ವಿಚಾರವನ್ನು ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಕಾವೇರಿ ಕಣಿವೆಗೆ ಸಂಬಂಧಪಟ್ಟ ಹಾಗೆ ನಮ್ಮ ರಾಜ್ಯದಲ್ಲಿ 52 ಪರ್ಸೆಂಟ್ ನೀರಿನ ಉತ್ಪತ್ತಿ ಇದೆ. ಆದರೂ ಸಹ 25 ಪರ್ಸೆಂಟ್ ಮಾತ್ರ ಈಗ ನಮ್ಮ ರಾಜ್ಯದಲ್ಲಿ ಉಪಯೋಗವಾಗುತ್ತದೆ. ಕೇಂದ್ರ ಸರ್ಕಾರದವರು ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳಿಗೆ ಈ ನೀರಿನ ಬಗ್ಗೆ ಇರುವ ವ್ಯಾಜ್ಯವನ್ನು ಪರಿಹಾರ ಮಾಡತಕ್ಕ ಸಂದಿಗ್ಧ ಪರಿಸ್ಥಿತಿಯಲ್ಲಿ ನೀರಿನ ನ್ಯಾಯವಾದ ಪಾಲು ನಮಗೆ ಸಿಕ್ಕಬೇಕಾಗಿದೆ. ನಮ್ಮ ಸರ್ಕಾರದವರು ಸ್ವಲ್ಪ ದಾರಿ ತಪ್ಪಿದರೂ ಸಹ, ಸರಿಯಾದ ರೀತಿಯಲ್ಲಿ ವರ್ತನೆ ಮಾಡದೆ ಹೋದರೆ ನಮಗೆ ಸಿಕ್ಕಬೇಕಾದ ನೀರಿನ ಪಾಲು ಸಿಕ್ಕುವುದಿಲ್ಲ. ಆದುದರಿಂದ ಕಾವೇರಿ ವ್ಯಾಲಿ ಅಥಾರಿಟಿ ಎಂಬ ಸಂಸ್ಥೆಯನ್ನು ಮಾಡ ಬೇಕೆಂದು ಕೇಂದ್ರ ಸರ್ಕಾರದವರು ಆಲೋಚನೆ ಮಾಡುತ್ತಿರತಕ್ಕ ಕಾಲದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅದರ ಆಗುಹೋಗುಗಳನ್ನು ಚೆನ್ನಾಗಿ ಪರ್ಯಾಲೋಚನೆ ಮಾಡಿ, ಆ ಕರಡನ್ನು ನೋಡಿ ನಮ್ಮ ರಾಜ್ಯಕ್ಕೆ ನ್ಯಾಯವಾದ ನೀರಿನ ಪಾಲು ಬರುವಂತೆ ಮಾಡಬೇಕು. ಹಾಗೆ ಮಾಡದೆ ಹೋದರೆ ಈಗ ಕಟ್ಟತಕ್ಕ ಕಬಿನಿ ಹೇಮಾವತಿ ಜಲಾಶಯ ಹಾರಂಗಿ, ಕಂಬಂದಕಡ ಇವುಗಳಿಗೆ ನೀರು ಸಿಕುವುದಿಲ್ಲ. ವಾಟೆಹೊಳೆ, ಯಗಚಿ ಪ್ರಾಜೆಕ್ಟುಗಳನ್ನು ತೆಗೆದುಕೊಳ್ಳಬೇಕಾದರೆ ಅದಕ್ಕೂ ನೀರು ಒದಗುವ ಹಾಗೆ ನೋಡಿಕೊಳ್ಳಬೇಕಾದ್ದು ಮುಖ್ಯ. ಮಾನ್ಯ ಮುಖ್ಯ ಮಂತ್ರಿಗಳು ಈ ಸಂದರ್ಭದಲ್ಲಿ ದೇಶದ ಹಿತರಕ್ಷಣೆ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಯಾವುದೇ ದೇಶ ಪ್ರಗತಿ ಹೊಂದಬೇಕಾದರೆ ವಿದ್ಯುಚ್ಛಕ್ತಿ ಬಹಳ ಮುಖ್ಯ. ಕಾಳಿನದಿ ವಿದ್ಯುತ್ ಯೋಜನೆಗೆ ಹಣವನ್ನು ಕೇಂದ್ರ ಸರ್ಕಾರದವರು ಒದಗಿಸಬೇಕೆಂದು ನಮ್ಮ ಸರ್ಕಾರ ದವರು ಒತ್ತಾಯ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ ಮತ್ತು ಆ ರೀತಿ ಮಾಡುತ್ತಿದ್ದಾರೆಂದು ನಾನು ನಂಬಿದ್ದೇನೆ.

ನಮ್ಮ ರಾಜ್ಯದಲ್ಲಿ ಅರಣ್ಯಗಳು ಬಹುಮಟ್ಟಿಗೆ ನಾಶವಾಗುತ್ತಿವೆ. ಹಾಸನ ಜಿಲ್ಲೆಯಲ್ಲಿ ಅರಣ್ಯವಿರತಕ್ಕ ಪ್ರದೇಶವೆಂದರೆ ಸಕಲೇಶಪುರ ತಾಲ್ಲೂಕು ಮಾತ್ರ. ಅಲ್ಲಿ ಅರಣ್ಯ ಬಹಳಮಟ್ಟಿಗೆ ನಷ್ಟವಾಗುತ್ತಿದೆ. ಮರಗಳನ್ನು ಸಿಕ್ಕಾಪಟ್ಟೆ ಕಡಿದು ಕಳ್ಳಸಾಗಾಣಿಕೆಗೆ ಮಾಡುತ್ತಿದ್ದಾರೆನ್ನುವ ದೂರು ಬಂದಿದೆ. ಸಾ ಮಿಲ್ಸ್ ಮಾಲೀಕರ ಮೇಲೆ ಹೆಚ್ಚಿನ ಹತೋಟಿಯನ್ನಿಟ್ಟುಕೊಂಡರೆ ಒಳ್ಳೆಯದು ಅದೇ ರೀತಿ ಅರಣ್ಯಗಳನ್ನು ಬೆಳೆಸುವುದಕ್ಕೂ ಸರ್ಕಾರದವರು ವ್ಯಾಪಕವಾದ ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡಬೇಕು. ಇಲ್ಲದೆ ಹೋದರೆ ನಮ್ಮ ದೇಶದಲ್ಲಿ ಅರಣ್ಯ ಬಹು ಬೇಗ ನಷ್ಟವಾಗಿ ಅದರಿಂದ ಅನಾಹುತವಾಗುತ್ತದೆಂದು ಹೇಳಬಯಸುತ್ತೇನೆ.

ವೈದ್ಯಕೀಯ ಇಲಾಖೆಯಲ್ಲಿ ಈಗ 100 ವೈದ್ಯಕೀಯ ಉಪಕೇಂದ್ರಗಳನ್ನು ಮಂಜೂರು ಮಾಡಿದ್ದಾರೆಂದು ಹೇಳಿದ್ದಾರೆ. ಅದನ್ನು ಕೊಡುವಾಗ ಮಲೆನಾಡು ಪ್ರದೇಶಕ್ಕೆ ಸ್ವಲ್ಪ ರಿಯಾಯಿತಿ ಕೊಡಬೇಕಾಗುತ್ತದೆ. ಮಲೆನಾಡು ಪ್ರದೇಶದಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿಲ್ಲ, ಜನಸಂಖ್ಯೆ ಕಡಿಮೆ ಇರುತ್ತದೆ. ಇದನ್ನು ಗಮನಕ್ಕೆ ತೆಗೆದುಕೊಂಡು ಹೆಚ್ಚು ಸಂಖ್ಯೆಯಲ್ಲಿ ವೈದ್ಯಕೀಯ ಕೇಂದ್ರಗಳನ್ನು ಅಲ್ಲಿಗೆ ಕೊಡಬೇಕೆಂದು ಹೇಳುತ್ತೇನೆ. ಅಲ್ಲಿ ಖಾಯಿಲೆಯಿಂದ ನರಳುವವರು ಜಾಸ್ತಿ ಇರುತ್ತಾರೆ. ಆದ್ದರಿಂದ ಮಲೆನಾಡು ಪ್ರದೇಶಗಳಿಗೆ ಹೆಚ್ಚು ರಿಯಾಯಿತಿ ಕೊಟ್ಟು ಹೆಚ್ಚು ಕೇಂದ್ರಗಳನ್ನು ಮಂಜೂರು ಮಾಡಬೇಕೆಂದು ನಾನು ಆರೋಗ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ; ಮತ್ತು ಸಕಲೇಶಪುರ ತಾಲ್ಲೂಕಿನ ಉದೇವಾರ ಗ್ರಾಮಕ್ಕೆ ಒಂದು ವೈದ್ಯಕೀಯ ಉಪ ಕೇಂದ್ರವನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ,

ರಾಜ್ಯಪಾಲರು ಒಂದು ವಿಷಯವನ್ನು ಕೈ ಬಿಟ್ಟಿರುವುದು ನನಗೆ ವ್ಯಸನವನ್ನುಂಟುಮಾಡಿದೆ. ಮಲೆನಾಡು ಅಭಿವೃದ್ಧಿ ಮಂಡಲಿ ವಿಚಾರವಾಗಿ ಅವರು ಏನೂ ಹೇಳಿಲ್ಲ. ಮಲೆನಾಡು ಅಭಿವೃದ್ಧಿ ಮಂಡಲಿಯಾದರೆ ಅದರಿಂದ ಮಲೆನಾಡು ಸಮಗ್ರವಾಗಿ ಅಭಿವೃದ್ಧಿ ಹೊಂದುವುದಕ್ಕೆ ಅವಕಾಶವಿದ್ದು ತನ್ಮೂಲಕ ಇಡೀ ದೇಶಕ್ಕೆ ಹೆಚ್ಚಿನ ಪ್ರಯೋಜನವಾಗುತ್ತದೆ. ಈ ಬಗ್ಗೆ ಆಗಿಂದಾಗೆ ಈ ಸದನದಲ್ಲಿ ನಾವು ಒತ್ತಾಯ ಮಾಡುತ್ತ ಬಂದಿದ್ದೇವೆ. ಸರ್ಕಾರದವರು ಈ ಕಡೆ ಹೆಚ್ಚು ಗಮನ ಕೊಟ್ಟು ಮಲೆನಾಡು ಅಭಿವೃದ್ಧಿ ಮಂಡಲಿಯನ್ನು ಪ್ರಾರಂಭ ಮಾಡಬೇಕಾಗಿದೆ. ನಮ್ಮ ದೇಶದ ಹಿತರಕ್ಷಣೆಯಾಗಬೇಕಾದರೆ ಕೇಂದ್ರದಲ್ಲಿ ಪ್ಲಾನಿಂಗ್ ಕಮಿಷನ್‌ನಲ್ಲಿ ಮತ್ತು ಕೇಂದ್ರ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ನಮ್ಮ ಪ್ರತಿನಿಧಿಗಳು ಇರತಕ್ಕದ್ದು ಅತ್ಯಾವಶ್ಯಕ. ಅದನ್ನು ಸಹ ನಮ್ಮ ರಾಜ್ಯ ಸರ್ಕಾರದವರು ಕೇಂದ್ರಕ್ಕೆ ಒತ್ತಾಯಮಾಡಿ ಕನ್ನಡಿಗರು ಕೇಂದ್ರದಲ್ಲಿ ಪ್ಲಾನಿಂಗ್ ಕಮಿಷನ್ ಹಾಗೂ ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ ಇರುವಂತೆ ಮಾಡಬೇಕೆಂದು ಹೇಳಿ, ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri N. B. SIRDESAI (Khanapur).—Madam Speaker, His Excellency the Governor of Karnataka has delivered a customery and most disappointing address. So, I have to oppose the Motion of Thanks to the Governor for his address and illustrate certain facts and reasons thereof. The policies and programmes of this Government should have been fully clarified in the address. The address contains only a repetition of the assurances of the policies and programmes. The Governor in his address has given a call to stimulate sustained and continuous economic development for ensuring social justice. I would like to say that it is not possible to ensure social justice in this State. He has taken the pride for introduction of socio-economic legislation To make this successful, the Government must make provision for financial aid to the tenants, and then only it would be possible to ensure social justice.

The Governor has stated in his address that his Government will continue to take measures to ensure that the Panchayati Raj institutions function effectively. I would say that these Panchayati Raj institutions have not become successful, and to say that he is going to make them successful would be only a dream.

Sri N. RACHAIAH (Minister for Social Welfare).—Will the hon. member make concrete suggestions with regard to the reorganisation of the Panchayati Raj institutions ?

Sri N. B. SIRDESAI.—All the Panchayati Raj institutions in the State are not functioning properly. They are not holding their monthly meetings also. The Government should try to see that they function properly. On the basis of many concrete instances, if we put a question to a common man or a peasant or a worker as to whether democracy is functioning in the State and the country, the answer will be an emphatic 'no'

12-30 P.M.

I say there is no demcoracy in our State because in the name of democracy or in the guise of democracy bureaucracy and dictatorship are ruling over the State and the country. The Co-operative movemen is being tarnished and defeated in the State and educational filed has

become devoid of sanctity. I will prove this later on. Corruption and nepotism have reached climax in almost all Government Departments. Madam Speaker, if we consider the functioning and administration of Government Departments, we find all aims of Constution such as justice, liberty, equality and fraternity are not successfully fulfilled. Social and economical political justice are being denied to many sections of the people. Liberty, equality and fraternity have become illusions and also the fundamental rights guaranteed under the Constitution cannot be enjoyed by the people freely. Social and economical and political justice are being denied to the maratni people of border areas You know that the linguistic States have been re-organised on the language basis For what purpose? It is for the betterment and the development of the Stetes and the country. Where the majority of the people are speaking Marati, and where they are demanding the merger of their areas in their language State. Why justice is being denied to these people by this State and the Central Government? Why agitation is being made and quarrels have been started between these two sections of the people? Agitation after agitation is going on on since 18 years in the border areas. Neither Kannadigas nor the Marathi people could be blamed for this agitation because an inordinate and unpardonable delay has been caused by the Central Government in the solution of border dispute. Properties worth of crores and crores of rupees have been perished on account of agitation last year. Who is responsible for this? Are the Kannadigas and Marathis responsible for this? I say neither Kannadigas nor Marathis are responsible for the chaotic agitation, but only the Central Government is responsible for this. Medam Speaker the Union Home Ministers have made catgorial statements on the floor of Parliament and even Smt. Indira Gandhi has also stated in support of these statements that the border problems would be solved before the ensuing general elections to the Parliament. But nothing has been so far done. Instead action has been taken by the State and the Central Governments to maintain law and order situation by threats and by undemocratic methods, It is not a correct oppreach and solution to the border problem. We feel that threats are prevailing throughout the bordor areas. These two linguistic groups are unnectessarily made to fight between themselves. At page 13 of the Governor's Address, it is stated 'Government is making continuous survey of problems faced by students'. I fail to understand where such efforts are being made by the Government. In to-day's demccratic set up the photos of national leaders were Shivaji Maharaj are being removed from the educational institutions like at Habshi village and dishonoured by the management and when the students went in agitation against this misdeeds, the Government has not taken any action against those who dispbonoured photos and insted the students were unnecessarily harassed. When the students demanded for separate Schools for their language at the same place that demand is not being considered by the State Government and the principles of democracy are being neglected and trampled.

I would like to say a few words about co-operative movement in the State. Though the Governer has stated that the policy of the Government is to strenthen the co-operative movement in the State, it is being done in contrary. For what purpose this co-operation movement is introduced ? This movement should provide essential commodities at normal rates to costomers and to ensure market facilities to agricultural produce. But the purpose for which this movement is meant is not fulfilled. It would be sufficient if I quote a single instance to prove that the co-operative movement is defeated The Sugar Factory at M.K. Hubli is not functioning properly and it is not serving the interests of the growers. The growers are complaining to the Government that their produce. i. e., sugarcane is not being lifted and it is not being purchased. They are putting all sorts of restrictions on the removal and on the sale of sugarcane and also on the preparation of jaggery unnecessarily and they are made to suffer heavy monetary loss. So they have failed to create marketing facilities to the agricultural produce of the growers. The crushing capacity of the Factory is only 1250 tonnes a day and the acreage under sugarcane cultivation is more than needed by the factory. The growers are not allowed to sell their produce to other needy factory and they are not allowed even to crush the sugarcane and prepare the jaggery. The ryots are made to suffer a heavy monetary loss.

Further, in the Address it is stated that the Land Develop ment Bank is sanctioning loans at the door-steps of the farmers. I think it is a slogan of Garibi Hatao of our Prime Minister. Unless they make these loans available at the door-steps this is going to be proved as only a mere slogan. Poverty is to be removed in our country. But poverty is increasing in the State day by day. The farmers are finding it very difficult to get the loans from the Government and from the Co-operative Societies and Banks Efforts for increasing production and equitable distribution have completely failed. It is an utter failure of this principle.

As regards Land Reforms that unless the financial help is rendered to the tenants this cannot be called as socio-economic legislation, because production will not be increased. I would like to bring to the notice of the Government that levy demands are inflated and by sitting at home the Revenue officers have prepared levy Demand Registers and they are demanding levy from the ryots.The demands are not genuine and unnecessarily the growers have been taxed and the undue demands of levy are being recovered from the tenants. They are being harassed unnecessarily. I can quote hundreds of instances where levy is being recovered from the ryots who have grown no paddy at all. Such an injustice is being done. I request the Government not to do injustice to the growers. The growers requirements of the fertilisers are not being met. When the Government is unable to meet their requirements, they cannot demand levy. The Government will

have legal rights to demand levy only when the requirement of the formers are met. Wi h these words I conclude my speach and thank the Chair.

† ಶ್ರೀ ಪಿ. ಪಿ. ಹೆಗರೆ (ಚಿಕ್ಕೋಡಿ).—ಸನ್ಮಾನ್ಯ ಸಭಾಧ್ಯಕ್ಷಿಣೀಯವರೇ ಕಳೆದ 10ನೇ ತಾರೀಖಿನ ದಿವಸ ಮಾನ್ಯ ರಾಜ್ಯಪಾಲರು ಈ ಜಂಟಿ ಸಭೆಯಲ್ಲಿ ಮಾಡಿದ ಭಾಷಣವನ್ನು ನಾನು ಸ್ವಾಗತಿಸುತ್ತಾ ಕೆಲವು ವಿಷಯಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಬಯಸುತ್ತೇನೆ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ನಮ್ಮ ರಾಜ್ಯದ ಪ್ರಗತಿ ಇನ್ನು ಮುಂದೆಯೂ ಒಳ್ಳೆಯ ರೀತಿಯಿಂದ ಸಾಗುತ್ತದೆ ಎನ್ನುವ ಭರವಸೆಯನ್ನು ಅವರು ಕೊಟ್ಟಿದ್ದಾರೆ. ಇದು ಅತ್ಯಂತ ಸಂತೋಷದ ಸಂಗತಿ. ನಮ್ಮ ರಾಜ್ಯ ಸರ್ಕಾರ ಸಮಾಜವಾದದ ಧೋರಣೆಯನ್ನೇ ಹಿಡಿದು, ಸಮಾಜವಾದದ ಘೋಷಣೆಯನ್ನು ಇವರೆವಿಗೆ ಮಾಡಿ ಈಗ ಸಮಾಜವಾದವನ್ನು ಪೂರ್ಣಗೊಳಿಸುವ ಉದ್ದೇಶದಿಂದ ಮುಂದೆ ಸಾಗಿದ್ದಾರೆ-ಎನ್ನುವುದಕ್ಕೆ ರಾಜ್ಯಪಾಲರ ಭಾಷಣ ಒಂದೇ ಸಾಕ್ಷಿಯಾಗಿದೆ ಆವರಲ್ಲಿ ನಮ್ಮ ಸರ್ಕಾರದವರು ಇತ್ತೀಚೆಗೆ ಕೈಕೊಂಡ ಈ ಭೂ ಸುಧಾರಣೆ ಕಾಯಿದೆ ಇದು ನಮ್ಮ ಭಾರತದಲ್ಲಿಯೇ ಯಾವ ರಾಜ್ಯದಲ್ಲೂ ಮಾಡದೇ ಇರತಕ್ಕಂಥ ಒಂದು ಕಾಯಿದೆಯನ್ನು ಮಾಡಿದ್ದಾರೆ. ಅದರ ಉದ್ದೇಶ, ಈವರೆವಿಗೆ ಮಾಡಿಕೊಂಡು ಬಂದಂಥ ಘೋಷಣೆ "ಉಳುವವನಿಗೆ ಭೂಮಿ, ಉಳುವವನೇ ಭೂಮಿಯ ಒಡೆಯನಾಗಬೇಕು" ಎನ್ನತಕ್ಕಂಥದ್ದನ್ನು ನಮ್ಮ ಸರ್ಕಾರ ಪೂರ್ಣ ಮಾಡಿದೆ. ಕೆಲವು ಸಮಾಜದ ವರ್ಗಕ್ಕೆ, ಯಾರಿಗೆ ಈ ಭೂ ಸುಧಾರಣಾ ಕಾಯಿದೆಯಿಂದ ಉಪಯೋಗವಾಗಬೇಕಾಗಿತ್ತೋ, ಯಾರಿಗೆ ಅನುಕೂಲವಾಗಬೇಕಾಗಿತ್ತೋ, ಯಾರ ಕಲ್ಯಾಣವಾಗಬೇಕಾಗಿತ್ತೋ ಅಂಥ ಕೆಲವು ಜನರಿಗೆ ಇದರಿಂದ ಕೆಲವು ತೊಂದರೆಗಳು ನಿರ್ಮಾಣವಾಗಿದೆ. ಅವನ್ನು ತಮ್ಮ ಮುಖಾಂತರ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳಬಯಸುತ್ತೇನೆ. ಈ ಭೂ ಸುಧಾರಣೆಯ ಕಾಯಿದೆಯಿಂದ ಉಳುವವನೇ ಭೂಮಿಯ ಒಡೆಯನಾಗಬೇಕು ಎನ್ನುವುದೊಂದು, ಇನ್ನೊಂದು ಹೆಚ್ಚಿನ ಭೂಮಿ ಯಾರಿಗೆ ಇರುತ್ತದೆಯೋ ಅವರಿಂದ ಅದನ್ನು ಪಡೆದು ಹರಿಜನ ಗಿರಿಜನರಿಗೆ, ಹಾಗೂ ಬಡವರಿಗೆ ಅದನ್ನು ಒದಗಿಸಬೇಕು ಎನ್ನತಕ್ಕಂಥದ್ದು ಎರಡು ಉದ್ದೇಶಗಳು. ಈ ಮೊದಲನೆಯ ಉದ್ದೇಶವೇನೊ ಪೂರ್ಣವಾಗಿಬಿಟ್ಟಿದೆ. ಉಳುವವನೇ ಭೂಮಿಯ ಒಡೆಯನಾಗಬೇಕು ಅದನ್ನು ನಮ್ಮ ಸರ್ಕಾರದವರು ಪೂರ್ಣ ಮಾಡಿಬಿಟ್ಟಿದ್ದಾರೆ, ಆದರೆ ಎರಡನೆಯ ಉದ್ದೇಶವೇನಿದೆ ಹೆಚ್ಚಿನ ಭೂಮಿ ಯಾರಿಗೆ ಇದೆಯೋ ಅವರಿಂದ ಪಡೆದು ಹರಿಜನರು ಗಿರಿಜನರಿಗೆ ಕೊಡಬೇಕಾಗಿದೆ. ನಾನು ಹಳೆ ಮೈಸೂರಿನ ಹರಿಜನರ ವಿಷಯ ಮಾತನಾಡುತ್ತಾ ಇಲ್ಲ. ನಮ್ಮ ಬೆಂಬಯಿ ಕರ್ನಾಟಕದ ಹರಿಜನ ಗಿರಿಜನರ ಬಗ್ಗೆ ಹೇಳುತ್ತಿದ್ದೇನೆ. ನಮ್ಮ ಕಡೆಗೆ ಏನು ಆಗಿವೆ ಎಂದರೆ ಅವರಿಗೆ 5–10 ಗುಂಟೆ ಭೂಮಿ ಇರುವುದು, ಮೊದಲು ಅವರಿಗಿದ್ದ ಭೂಮಿಯನ್ನು ಋಣದ ಅಡಚಣೆಯಿಂದ ಉತ್ತಮವಾದ ಭೂಮಿಯನ್ನು ಬೇರೆಯವರಿಗೆ 50 ರೂಪಾಯಿಗಳಿಂದ ಹಿಡಿದು 500 ರೂಪಾಯಿಗಳವರೆಗೆ ತೆಗೆದುಕೊಂಡು ಅವರಿಗೆ ಒತ್ತೆ ಹಾಕಿ ಬಿಟ್ಟಿದ್ದಾರೆ. ಆ ಭೂಮಿಗಳೆಲ್ಲಾ ರೈತರ ಕಬ್ಜವಾಗಿ ಬಿಟ್ಟಿದೆ. ಹೆಚ್ಚಿಗಿದ್ದವರಿಂದ ಭೂಮಿಯನ್ನು ಪಡೆದು ಯಾರಿಗೆ ಹಂಚಬೇಕಾಗುತ್ತೋ, ಆ ಹರಿಜನರೇ ತಮಗಿದ್ದ ಭೂಮಿಯನ್ನು ಕಳೆದುಕೊಂಡು ಬಿಟ್ಟಿದ್ದಾರೆ. ಅವರು ಲ್ಯಾಂಡ್ ರಿಫಾರಂಸ್‌ನ ಆಕ್ಟ್ ಪ್ರಕಾರ ತಿರುಗಿ ಏನೂ ಅವರು ಭೂಮಿಯನ್ನು ಪಡೆದುಕೊಳ್ಳಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಅದು ಮಾಡಿದ್ದು ಒಳ್ಳೆಯದು ತಪ್ಪು ಎಂದು ಹೇಳುವುದಿಲ್ಲ. ಅದರ ಪರಿಣಾಮ ಏನಾಗಿದೆ ಆ ಬಡವರು ಇದ್ದ ಅಲ್ಪಸ್ವಲ್ಪ ಭೂಮಿಯನ್ನು ಸಹ ಕಳೆದುಕೊಳ್ಳುತ್ತಿದ್ದಾರೆ. ನಮ್ಮ ಮಾನ್ಯ ಮಂತ್ರಿಗಳವರಿಗೂ ಈ ವಿಷಯ ಗೊತ್ತು. ಬೆಳಗಾಂ ತಾಲ್ಲೂಕ್‌ನಲ್ಲಿ 90 ಪರ್ಸೆಂಟ್ ಜನ ಭೂಮಿಯನ್ನೆಲ್ಲ ಕಳೆದುಕೊಂಡಿದ್ದಾರೆ. ಅದು ಎಲ್ಲಾ ರೈತರ ಕಬ್ಜವಾಗಿದೆ. ಅದಕ್ಕೆ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಈ ಕಾಯಿದೆಯಲ್ಲಿ ಚಿಕ್ಕ ಹಿಡುವಳಿದಾರರಿಗೆ ಏನಾದರೂ ರಿಯಾಯಿತಿ ಇರುವಂತೆ ಮಾಡಬೇಕು. ಏನಾದರೂ ಸುಧಾರಣೆ ಆಗುವಂತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾರಿಗೆ ಭೂಮಿ ಇತ್ತೋ ಅದು ಅವರಿಗೆ ಉಳಿಯುವ ಹಾಗೆ ಮಾಡಬೇಕು ಇದರಿಂದ ಸರ್ಕಾರದವರ ಕೆಲಸವೂ ಕಡಿಮೆಯಾದ ಹಾಗೆ ಆಗುತ್ತದೆ.

ಇನ್ನು ಎರಡನೆಯ ವಿಷಯ, ನಮ್ಮ ಸರ್ಕಾರದವರ ಉದ್ದೇಶದಂತೆ, ಸಮಾಜವಾದದ ಘೋಷಣೆಯಂತೆ, ಬಡವರ್ಗಕ್ಕೆ ಹಿತವಾಗಬೇಕು, ಅವರ ಕಲ್ಯಾಣವಾಗಬೇಕು ಎಲ್ಲರೂ ಸುಖಿಯಾಗಿರಬೇಕು ಎನ್ನತಕ್ಕಂಥ ಕಲ್ಪನೆಯಂತೆ ನಮ್ಮ ಸರ್ಕಾರದವರು ಕಾರ್ಯಕ್ರಮ ಕೈಗೊಂಡರೂ ಕೂಡ ಕೆಲವು ಕಡೆಗಳಲ್ಲಿ ಕೆಲವು ಶಬ್ದದ ದೋಷದಿಂದಲೋ ಏನೋ ಗೊತ್ತಿಲ್ಲ ಅದು ನಿಜವಾಗಿಯೂ ಬಡಜನರಿಗೆ ಉಪಯೋಗವಾಗುತ್ತಾ ಇಲ್ಲ. ನಾನು ಉದಾಹರಣೆಗಾಗಿ ಹೇಳುವುದಾದರೆ ಯಾರಿಗೆ ಮನೆ ಇಲ್ಲವೋ ಅವರಿಗೆ

ಮನೆ ಯಾರಿಗೆ ನಿವೇಶನ ಇಲ್ಲವೋ ಅವರಿಗೆ ಉಚಿತ ನಿವೇಶನವನ್ನು ನಮ್ಮ ಸರ್ಕಾರದವರು ಹಂಚುತ್ತಿದ್ದಾರೆ. ಇದು ಸ್ತುತ್ಯವಾದ ಕೆಲಸ. ನಮ್ಮ ದೇಶದಲ್ಲಿ ನೂರಕ್ಕೆ 40ರಷ್ಟು ಜನ ಅತ್ಯಂತ ಬಡತನದಲ್ಲಿದ್ದಾರೆ; ಬಿಲೋ ದಿ ಪಾವರ್ಟಿ ಲೈನ್ ಕೆಳಗೆ 40ರಷ್ಟು ಜನ ಯಾರಿದ್ದಾರೆ ಅದರಲ್ಲಿ 50 ಪರ್ಸೆಂಟ್‌ನಷ್ಟು ಹರಿಜನರ ಗಿರಿಜನರೇ ಇದ್ದಾರೆ ಇದು ಸತ್ಯ. ಯಾರು ಸಲುವಾಗಿ ಮನೆಗಳನ್ನು ನಿವೇಶನಗಳನ್ನು ಹಂಚುತ್ತಿದ್ದಾರೆ ಅವರಿಗೇ ಸಿಕ್ಕಿಲ್ಲ. ತಾವು ಅಂಕಿ ಸಂಖ್ಯೆಗಳನ್ನು ನೋಡಿದರೆ ಹರಿಜನರಿಗೆ 50 ಪರ್ಸೆಂಟ್‌ನಷ್ಟು ಬರಬೇಕಾಗಿತ್ತು, ಆದರೆ ಆ ರೀತಿ ಆಗಲಿಲ್ಲ. ಅವು ಅಷ್ಟು 15–20 ಪರ್ಸೆಂಟ್‌ನಷ್ಟು ಹರಿಜನರಿಗೆ ಅಲ್ಲಿಯ ಜನಸಂಖ್ಯೆಯ ಪ್ರಮಾಣಕ್ಕೆ ಅನುಸಾರವಾಗಿ ಅವರಿಗೆ ಹೋಗುತ್ತಿದೆ. ಹಾಗೂ ಮತ್ತೆ ಇನ್ನು ಯಾರಿಗೋ ಬೇರೆಯವರಿಗೆ ಹೋಗುತ್ತಿದೆ. ಇದಕ್ಕೆ ಒಂದು ಕಾರಣವಿದೆ. ನಾನು ಮುಂಬೈ ಕರ್ನಾಟಕದ ವಿಷಯವನ್ನು ಹೇಳುತ್ತಿದ್ದೇನೆ. ಮುಂಬೈ ಕರ್ನಾಟಕದೊಳಗೆ ಹರಿಜನರಿಗೆ ಮನೆ ಇದೆ, ಭೂಮಿ ಇದೆ. ಅವು ದೊಡ್ಡ ದೊಡ್ಡ ಮನೆಗಳು ಅಲ್ಲ ಚಿಕ್ಕ ಚಿಕ್ಕ ಮನೆಗಳು ಇವೆ ಅದರಲ್ಲಿ 4–5 ಕುಟುಂಬಗಳು ವಾಸವಾಗಿರುತ್ತಾರೆ. ಆ ಮೇಲೆ ಅವರಿಗೆ 5 ರಿಂದ 10 ಗುಂಟೆಗಳವರೆಗೆ ಮಾತ್ರ ಭೂಮಿ ಇದೆ. ಆದರೆ ಸರ್ಕಾರಿ ಆರ್ಡರ್ ಪ್ರಕಾರ ಲ್ಯಾಂಡ್ ಲೆಸ್, ಹೌಸ್‌ಲೆಸ್ ಎನ್ನುವ ಶಬ್ದ ವಿರುವುದರಿಂದ ಆ ವರ್ಗದ ಜನಕ್ಕೆ ಅದು ಮಾರಕವಾಗಿ ಬಿಟ್ಟಿದೆ. ಇದರ ಬಗ್ಗೆ ಒಂದೆರಡು ಸಲ ವಿನಂತಿ ಮಾಡಿಕೊಂಡಿದ್ದೆ. ಈ ಶಬ್ದ ಪ್ರಯೋಗದಿಂದ ತೊಂದರೆಯಾಗಿರುವುದರಿಂದ ಆ ಶಬ್ದದ ಪ್ರಯೋಗವನ್ನು ಡಿಫೈನ್ ಮಾಡಿ ಎಂದರೂ ಇಲ್ಲಿಯವರೆಗೂ ಡಿಫೈನ ಮಾಡಿಲ್ಲ. ಲ್ಯಾಂಡ್ ಲೆಸ್, ಹೌಸ್ ಲೆಸ್ ಎಂದು ಹಾಕಿರುವುದರಿಂದ ಅವರಿಗೆ ತೊಂದರೆಯಾಗಿದೆ, ಆದುದರಿಂದ ತಾವು ಇದರ ಬಗ್ಗೆ ಸರಿಯಾಗಿ ಡಿಫೈನ್ ಮಾಡಬೇಕು. ಇದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಹಾಗೆ ಮಾಡದಿದ್ದರೆ ನಿಮ್ಮ ಉದ್ದೇಶವೇನಿತ್ತೋ ಅದನ್ನು ಸಾಧನೆ ಮಾಡಿದಂತಾಗುವುದಿಲ್ಲವೆಂದು ಹೇಳಬೇಕಾಗಿದೆ.

ಇನ್ನು ಆಹಾರಧಾನ್ಯಗಳ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಿಂದ ಲೆವಿ ಯೆಂದು ಪಡೆದುಕೊಂಡು, ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಶ್ರೀಮಂತವರ್ಗಕ್ಕೆ ಹಂಚಿ ಬಿಡುತ್ತಿದ್ದೀರಿ. ಗ್ರಾಮಾಂತರ ಪ್ರದೇಶಗಳಲ್ಲಿ 100ಕ್ಕೆ 70ರಷ್ಟು ಬಡ ಜನಕ್ಕೆ ಒಂದು ಕಾಳೂ ಸಿಕ್ಕುವುದಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲ ಸರ್ಕಾರದವರಿಂದ ದೊರೆಯುವಂಥ ಧಾನ್ಯ ಒಂದು ತಿಂಗಳುಗಳಿಗೆ ಅವರಿಗೆ ಒಂದು ಕಾಳು ಸಹ ದೊರೆಯುತ್ತಿಲ್ಲ ಹಾಗಾದರೆ ಈ ಜನ ಬದುಕಬೇಕಾದರೆ ಏನು ಮಾಡಬೇಕು? ಹರಿಜನರ ಗಿರಿಜನರನ್ನು ಒಳಗೊಂಡ ಬಡ ಕೂಲಿಗಾರರು, ಭೂಹೀನರು ಬದುಕುವುದಕ್ಕೆ ಸರ್ಕಾರದವರು ಮಾಡಲಿಕ್ಕೆ ಸಾಧ್ಯವಿದೆಯೇ? ಗ್ರಾಮಾಂತರ ಪ್ರದೇಶಗಳಲ್ಲಿ ಮುಖ ತೋರಿಸದೇ ಇರುವ ಪ್ರಸಂಗ ಇದೆ, ನಮಗೆ ಏನು ಮಾಡಿದಿರಿ ಎಂದು ಕೇಳುತ್ತಾರೆ. ಗ್ರಾಮಾಂತರ ಪ್ರದೇಶದಲ್ಲಿ ಎರಡು ರೂಪಾಯಿ ಕೂಲಿಮಾಡುವ ಜನ ಚಾಲೆಂಜ್ ಮಾಡುತ್ತಾರೆ. ಅವರಿಗೆ ಆಹಾರ ಧಾನ್ಯವನ್ನು ಒದಗಿಸುವುದಕ್ಕೆ ಶಕ್ತಿ ಇಲ್ಲವೇ? ಅವರನ್ನು ಬದುಕಿಸುವಂಥ ವಿಚಾರವನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸುಖ ಬೇಡ ಅವರಿಗೆ ಏನಾದರೂ ಎರಡು ಹೊತ್ತು ಹೊಟ್ಟೆ ತುಂಬಿಸುವ ವಿಚಾರಮಾಡಿರಿ. ಒಳ್ಳೆಯ ಅಕ್ಕಿ, ಗೋದಿ, ಜೋಳ ಬೇಡ ಅತ್ಯಂತ ಕಡಿಮೆ ದರ್ಜೆಯ ಜೋಳವನ್ನು ಕಡಿಮೆ ದರದಲ್ಲಿ ಕೊಡಿ. ಎರಡು ರೂಪಾಯಿಗಿಂತ ಹೆಚ್ಚಿಗೆ ಯಾರೂ ಕೂಲಿ ಕೊಡುವುದಿಲ್ಲ ಇಂಥಾದ್ದರೊಳಗೆ ಹೇಗೆ ಅವರನ್ನು ಬದುಕಿಸಬೇಕೆಂಬುದನ್ನು ವಿಚಾರಮಾಡಿ. ಇಲ್ಲವೆ ಹೋದರೆ ಈ ಜನ ಎಲ್ಲರಮೇಲೆ ವಿಶ್ವಾಸ ಕಳೆದುಕೊಳ್ಳುತ್ತಾರೆ. ದುಃಖದಲ್ಲಿ ಇರತಕ್ಕಂಥ ಜನ ಈ ಒಂದು ನಿರ್ಧಾರಕ್ಕೆ ಬರುತ್ತಾರೆ. ಈ ನಿರ್ಧಾರಕ್ಕೆ ಜನ ಬರಕೂಡದು ಎಂದು ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಯಾರು ಬಿಲೋ ಪಾವರ್ಟಿ ಲೈನ್ 40 ಪರ್ಸೆಂಟ್ ಇದ್ದಾರೋ ಅವರು ಯಾರು ಎಂದು ಕೇಳಿದಾಗ ಡಿಸೈಡ್ ಮಾಡಿಲ್ಲ ಎಂದು ಸರ್ಕಾರ ಉತ್ತರ ಕೊಟ್ಟಿದೆ. ಅಷ್ಟು ಬೇಗ ಡಿಸೈಡ್‌ಮಾಡಿ, ಬಿಲೋ ಪಾವರ್ಟಿ ಲೈನ್ ಯಾರು ಎಂದು ಡಿಫೈನ್‌ಮಾಡಿ. ಹಾಗೆ ಗ್ರಾಮಾಂತರ ಪ್ರದೇಶದಲ್ಲಿ ಏನಾದರು ಸೌಕರ್ಯ ಕೊಡಬೇಕಾದರೆ, ಅವರು ಮೆಚ್ಚುವಂತ ವ್ಯವಸ್ಥೆಮಾಡಿ, ಕಾಗೋಡು ತಿಮ್ಮಪ್ಪನವರು ಹಾಗೂ ಬಂಗಿಯವರು ಈಗಾಗಲೇ ಹೇಳಿದ್ದಾರೆ. ಕಾಳು ಕಡ್ಡಿ ಏನು ಸಿಕ್ಕುವುದಿಲ್ಲ ಎಂದು ಸತ್ಯ ಸಂಗತಿ, ಇದ್ದ ಪರಿಸ್ಥಿತಿಯನ್ನು ಹೇಳಿದ್ದಾರೆ. ಇದನ್ನು ಮೇಲೆ ಮೇಲೆ ಹೇಳುವುದರಿಂದ ಸರ್ಕಾರದ ಮೇಲೆ ಏನು ಪರಿಣಾಮವಾಗುವುದಿಲ್ಲ. ದಯಮಾಡಿ ಈ ಸರ್ಕಾರಕ್ಕೆ ನಮ್ರಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬಡ ಜನತೆ ಸಮಾಧಾನದಿಂದ ಬಾಳಬೇಕು ಎನ್ನುವ ವಿಚಾರ ಮಾಡಬೇಕು ಆ ತರಹ ಕ್ರಮ ತೆಗೆದುಕೊಳ್ಳಬೇಕು ಎಂದು ವಿನಂತಿ ಮಾಡಿಕೊಂಡು, ಇಷ್ಟು ಅವಕಾಶ ಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಂ. ಸಜ್ಜನ್ (ಮುದ್ದೇಬಿಹಾಳ್).—ಸನ್ಮಾನ್ಯ ಸಭಾಧ್ಯಕ್ಷಣಿಯವರೇ, ಈ ದಿವಸ ರಾಜ್ಯಪಾಲರ ಮಾತುಗಳನ್ನು ಅನುಮೋದಿಸಿ ಅವರಿಗೆ ಅಭಿನಂದನೆ ಸಲ್ಲಿಸಿ ನಾಲ್ಕು ಸಲಹಾ ಸೂಚಕ ಮಾತುಗಳನ್ನು ಹೇಳುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ದಿವಸ ಸರ್ಕಾರ ಅಂತರಂಗಕ್ಕೆ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು ಎಂದು ಹೇಳುತ್ತೇನೆ. ಸರ್ಕಾರದ ಮುಖ್ಯ ಕಾರ್ಯಗಳು ಏನು, ಸರ್ಕಾರದ ಮುಖ್ಯ ಕೆಲಸಗಳಾವುವು ಎನ್ನುವುದನ್ನು ತಿಳಿದು ನೋಡಿದಾಗ, ಜನಸಾಮಾನ್ಯರು ಸಹಜವಾಗಿ ಸರಳವಾಗಿ, ಶಾಂತವಾಗಿ, ಸುಖವಾಗಿ ಬದುಕಿ ಬಾಳುವುದಕ್ಕೆ ಅನುವು ಮಾಡಿಕೊಡುವುದು, ಅಲ್ಲದೆ ಶ್ರೀಸಾಮಾನ್ಯನ ಬಾಳುವೆಗೆ ಮೂಲವಾಗಿ ಬೇಕಾದುದು ಅನ್ನ, ಅರಿವೆ, ಅರಿವು ಮತ್ತು ಆಸಕ್ತಿ ಇವುಗಳನ್ನು ಶ್ರೀಸಾಮಾನ್ಯನಿಗೆ ಸರ್ಕಾರ ಸಕಾಲದಲ್ಲಿ ಒದಗಿಸಿದೆಯೋ ಎಂಬ ಪ್ರಶ್ನೆಯನ್ನು ಸರ್ಕಾರದ ಅಂತರಂಗಕ್ಕೆ ಕೇಳಿಕೊಳ್ಳಬೇಕು. ಅನ್ನ, ಅರಿವೆ ಮತ್ತು ಅರಿವು ಮನುಷ್ಯರಿಗೆ ಒದಗಬೇಕಾದರೆ, ದುಡಿಮೆ ಬೇಕು, ದುಡಿಮೆ ಬೇಕಾದರೆ ಕೆಲಸ ಒದಗಿಸಬೇಕು. ಹಳ್ಳಿಗಳಲ್ಲಿ ಮುಖ್ಯವಾಗಿ ದೀನದಲಿತರಿಗೆ ಕೊನೆಯ ಪಕ್ಷ ಕೂಲಿ ಕೆಲಸವನ್ನಾದರೂ ಒದಗಿಸಬೇಕು. ಹೀಗೆ ಶ್ರೀಸಾಮಾನ್ಯನಿಗೆ ಎಲ್ಲಾ ಕಾಲದಲ್ಲಿಯೂ ಕೆಲಸ ಸಿಗುವಂತೆ ವ್ಯವಸ್ಥೆ ಮಾಡಿದೆಯೆ ? ಮುಖ್ಯವಾಗಿ ಯುವಕರಿಗೆ ಉದ್ಯೋಗ, ಉದ್ಯಮ ಒದಗಿಸುವಂತೆ ವ್ಯವಸ್ಥೆ ಮಾಡಿದೆಯೆ ಎಂದು ಸರ್ಕಾರ ಅಂತರಂಗಕ್ಕೆ ಕೇಳಿಕೊಳ್ಳಬೇಕು. ನನಗೆ ತಿಳಿದಂತೆ ದುಡಿಮೆ ಇಲ್ಲದೆ ದುಡ್ಡು ದೊರಕುವುದಿಲ್ಲ, ದುಡ್ಡು ದೊರಕದೆ ಅನ್ನ ಅರಿವು ಅರಿವೇ ಶಿಕ್ಷಣ ಆಸಕ್ತಿ ಯಾವುದಾದರೂ ಶ್ರೀಸಾಮಾನ್ಯನಿಗೆ ಸಿಕ್ಕಿದೆಯೇ, ಕಾರಣ ದುಡಿಮೆ ಒದಗಿಸಬೇಕಾದುದು ಸರ್ಕಾರ ಮೊದಲನೆ ಕೆಲಸ ಎಂದು ನಾನು ತಿಳಿದುಕೊಂಡಿದ್ದೇನೆ. ಅನಂತರ ಅನ್ನ, ಅರಿವೆ, ಅರಿವು, ಶಿಕ್ಷಣ, ಆಸರೆ ಒದಗಿಸಿಕೊಡುವುದು ಎರಡನೆ ಕೆಲಸ. ಮೂರನೆ ಕೆಲಸ ಆರ್ಥಿಕ ಸಾಮಾಜಿಕ ಸಮಾನತೆ ಸಮಸ್ಯೆಯ ವಿಚಾರ. ದಾಸರು ಆಡಿರುವ ಹಾಗೆ ಎಲ್ಲರೂ ಮಾಡಿರುವುದು ಗೇಣು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ ಅದಕ್ಕಾಗಿ ನಮಗೆ ಬದುಕು ಮಾಡುವುದಕ್ಕೆ ಬೇಕಾಗಿರುವುದು ಮುಖ್ಯವಾಗಿ ಅನ್ನ ಅದಕ್ಕೆ ಬೇಕಾದುದು ದುಡಿಮೆ, ಕೆಲಸ. ಅದನ್ನು ಈ ದಿವಸ ಹಳ್ಳಿಗಳಲ್ಲಿ ಇರತಕ್ಕಂಥ, ಗ್ರಾಮಾಂತರದಲ್ಲಿರತಕ್ಕ ಶ್ರೀಸಾಮಾನ್ಯನಿಗೆ ಸರ್ಕಾರ ಒದಗಿಸಿಕೊಡಬೇಕಾಗಿದೆ. ನನಗೆ ಅನುಭವ ಬಂದಿದೆ, ಹಳ್ಳಿಗಳಲ್ಲಿ ಬಡ ಜನರು ಉಪವಾಸ ಬೀಳತಕ್ಕ ಪ್ರಸಂಗ ಇದೆ. ಈ ಸರ್ಕಾರ ಹಂಚಿಕೆಕ್ಕ ಕಾಳುಕಡ್ಡಿ, ದವಸಧಾನ್ಯ ಸರಿಯಾಗಿ ಸಿಕ್ಕುವುದಿಲ್ಲ ಎಂದು ಬಹು ವಿಷಾದದಿಂದ ಹೇಳುತ್ತೇನೆ, ಶ್ರೀಸಾಮಾನ್ಯನ ಹೃದಯಾಂತರದಲ್ಲಿ ನೆಮ್ಮದಿ, ಶಾಂತಿ ಮತ್ತು ಸ್ವಾಸ್ಥತೆ ನೆಲೆಗೊಂಡಿದೆಯೇ ಎಂಬುದನ್ನು ಸರ್ಕಾರ ವಿಶ್ಲೇಷಣೆ ಮಾಡಬೇಕು ಎಂದು ನಾನು ಹೇಳುತ್ತೇನೆ. ಅದನ್ನು ಅಳೆದು ನೋಡಬೇಕು, ತಿಳಿದು ನೋಡಬೇಕು. ಸಾಮಾನ್ಯವಾದ ಅಗತ್ಯತೆಗಳನ್ನು ಒದಗಿಸಬೇಕು ಈ ರೀತಿ ಮಾಡಿದರೆ ಸರಕಾರದ ಕೀರ್ತಿ ಹೆಚ್ಚುತ್ತದೆ, ಸರ್ಕಾರದ ಕೀರ್ತಿ ಬೆಳೆಯುತ್ತದೆಂದು ನನ್ನ ಭಾವನೆ. ಅದನ್ನು ಇಂದಿನ ಸರ್ಕಾರ ಸಾಧಿಸಬೇಕು, ಮಾನ್ಯ ಈ ಸದನದ ಸದಸ್ಯರು ಕೂಡ ಸಹಾಯ ಮಾಡಬೇಕು. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರು ರಚನಾತ್ಮಕ ಸಲಹೆಗಳನ್ನು, ಸಮಯೋಚಿತ ಟೀಕೆ ಟಿಪ್ಪಣಿಗಳನ್ನು ಮಾಡುವುದು ಉಚಿತ. ಕೇವಲ ಅಪಾದನೆಗಳ ಕಡೆಗೆ ಗಮನಕೊಡದೆ, ಆ ಜಾತಿ ಈ ಜಾತಿ ಎಂದು ಹೇಳುವುದಕ್ಕಿಂತ ಬಡವರದೇ ಒಂದು ಜಾತಿ ಎಂದು ತಿಳಿದು ಅವರನ್ನು ನಿರ್ಧರಿಸಿ ಅವರ ಏಳಿಗೆಗೆ ಸರ್ಕಾರದವರು ಕಾರ್ಯಕ್ರಮ ಹಾಕಿಕೊಳ್ಳಬೇಕು ಎಂದು ಸೂಚನೆ ಮಾಡುತ್ತೇನೆ. ನನಗೆ ಗೊತ್ತಿದಷ್ಟು ಮಟ್ಟಿಗೆ ಕಳ್ಳಪೇಟೆ, ಸುಳ್ಳುಪೇಟೆ, ಜೊಳ್ಳುಗಿಳ್ಳು ಕಾರಬಾರಗಳ ಕಥೇರಿ ಕೂಡಲೇ ನಿರ್ಮೂಲನಾಗಬೇಕು. ಹಾಗೆ ಆದರೆ ಶ್ರೀಸಾಮಾನ್ಯನಿಗೆ ಅನ್ನ ಅರಿವೆ ಸಿಕ್ಕಿ ನಾಡಿನಲ್ಲಿ ಹಾಲಿನ ಹೊಳೆ ಹರಿಯುತ್ತದೆಂದು ನನ್ನ ಅಭಿಪ್ರಾಯ.

ಮುಖ್ಯವಾಗಿ ಶಿಕ್ಷಣ ಪದ್ಧತಿಯಲ್ಲಿ ಬದಲಾವಣೆ ಆಗಬೇಕು. ರೀತಿನೀತಿಗಳು, ಮೌಲ್ಯದ ಕೊರತೆ ಸ್ವಯಂ ಉದ್ಯಮಗಳನ್ನು ಹುಟ್ಟಿಸತಕ್ಕ ಶಿಕ್ಷಣ ಪದ್ಧತಿ ಏರ್ಪಾಡಾಗಬೇಕು ಮತ್ತು ಮಾರ್ಪಾಡಾಗಬೇಕು. ಮುಖ್ಯವಾಗಿ ಶಿಕ್ಷಣದಲ್ಲಿ ಕ್ರಾಂತಿ ಆಗಬೇಕು. ಪ್ರಾಥಮಿಕ ಶಿಕ್ಷಣ ಮೂಲ ಬಂಧು ಆಗಿರುವುದರಿಂದ, ಪ್ರಾಥಮಿಕ ಶಿಕ್ಷಣದಲ್ಲಿ ಕ್ರಾಂತಿ ಆಗಬೇಕು. ಈ ಬಗ್ಗೆ ಸರ್ಕಾರ ಯೋಜನೆಗಳನ್ನು ಕೈಗೊಳ್ಳಬೇಕು ಎನ್ನುವ ಸೂಚನೆ ಕೊಡುತ್ತೇನೆ. ಮುಖ್ಯವಾಗಿ ಹಳ್ಳಿಗಳಲ್ಲಿ ಅನಕ್ಷರತೆ ಹೆಚ್ಚಿದೆ, ಅನಕ್ಷರತೆಯನ್ನು ನಾಡಿನಿಂದ ತೊಲಗಿಸಬೇಕು. ಅದಕ್ಕೆ ಅನುಗುಣವಾಗಿ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳಬೇಕು. ವೈಜ್ಞಾನಿಕ, ಕೃಷಿ ವಿಜ್ಞಾನ ಹಾಗೂ ಉದ್ಯಮದಲ್ಲಿ ಜ್ಞಾನ ಹೆಚ್ಚುವಂತ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು. ಅಲ್ಲದೆ ಹೈಸ್ಕೂಲು ಮಟ್ಟದಲ್ಲಿ ಇಂಥ ಶಿಕ್ಷಣ ಪದ್ಧತಿಗಳನ್ನು ಜಾರಿಗೆ ತರಬೇಕು. ವಿದ್ಯಾರ್ಥಿ ತನ್ನ ಬೆಳೆವ ಬದುಕನ್ನು ಒಳ್ಳೆಯದನ್ನಾಗಿ ಮಾಡಿಕೊಳ್ಳುವುದಕ್ಕೆ ಹಳ್ಳಿಗಳಲ್ಲಿ ದುಡಿಯುವುದಾಗಲೀ, ಕಾರ್ಖಾನೆಗಳಲ್ಲಿ ದುಡಿಯುವುದಾಗಲೀ ಕರ್ತವ್ಯ ಮಾಡಿಕೊಂಡು ಬದುಕುವರು ಎಂದು ನನ್ನ ಅಭಿಪ್ರಾಯ.

ಇನ್ನು ಉತ್ಪಾದನೆ ಹೆಚ್ಚುವುದಕ್ಕೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಉತ್ಪಾದನೆ ಹೆಚ್ಚುವರಿ ವ್ಯವಸ್ಥೆ ಬಗ್ಗೆ ಬರೆದಿದ್ದಾರೆ. ನ್ಯಾಯವಾದ ಹಂಚಿಕೆ ವಿಚಾರ ಮಾಡಿದಾಗ, ಬಹುತೂತು ಇರ ತಕ್ಕ ಗಡಿಗೆಯಲ್ಲಿ ಎಷ್ಟು ನೀರು ತುಂಬಿದರೆ ಏನು, ಅದು ಹೋಗಬೇಕಾಗುತ್ತದೆ. ಕಾಳು ಕಡ್ಡಿ, ದವಸ ಧಾನ್ಯ ಮತ್ತು ಸಕ್ಕರೆ ನ್ಯಾಯವಾಗಿ ಹಂಚಿಕೆಯಾಗುತ್ತಾ ಇಲ್ಲ ಎನ್ನುವ ಮಾತನ್ನು ವಿಷಾದದಿಂದ ಹೇಳುತ್ತೇನೆ.

1–00 P.M.

ಅದಕ್ಕಾಗಿ ಸರ್ಕಾರದವರು ಸೂಕ್ತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಎಲ್ಲರಿಗೂ ಸರಿಯಾಗಿ ದವಸಧಾನ್ಯಗಳು ಸಿಕ್ಕುವ ವ್ಯವಸ್ಥೆಯನ್ನು ಮಾಡಬೇಕು. ದುರ್ಬಲರು ನಿರ್ಬಲರು, ಮತ್ತು ಅಸಹಾಯಕರ ಬಗ್ಗೆ ನಾವು ಏನು ಕಾಳಜಿ ಮಾಡುತ್ತೇವೆ ಆ ಕಾಳಜಿ ಸಫಲ ವಾಗುತ್ತದೆ. ಆಗ ಅದು ಎಲ್ಲರಿಗೂ ಸಿಕ್ಕುತ್ತದೆ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ. ಇನ್ನು ತಮಗೆ ಬಿಜಾಪುರ ಜಿಲ್ಲೆಯ ಬಗ್ಗೆ ಗೊತ್ತಿರಬೇಕು. ಇದನ್ನು ನಾನು ಬಹಳ ವಿಷಾದದಿಂದ ಹೇಳ ಬೇಕಾದ ಪ್ರಸಂಗ ಬಂದಿದೆ.ಬಿಜಾಪುರ ಜಿಲ್ಲೆಯಲ್ಲಿ ಕಳೆದ ಏಳು ವರ್ಷಗಳಿಂದ ಲಾಗಾಯಿತು ಬರ ಗಾಲದ ದವಡೆಗೆ ಸಿಕ್ಕಿ ಈ ಜಿಲ್ಲೆ ಒದ್ದಾಡುತ್ತಿದೆ. ಅದನ್ನು ಅಭಿವೃದ್ಧಿಯ ಕಡೆಗೆ ತೆಗೆದುಕೊಂಡು ಹೋಗಬೇಕು. ಅದಕ್ಕಾಗಿ ನನಗೆ ತಿಳಿದ ಹಾಗೆ ಡ್ರೈಲ್ಯಾಂಡ್ ಏರಿಯಾ ಡೆವಲಪ್‌ಮೆಂಟ್ ಯೋಜನೆಯನ್ನು ಕೈಗೊಂಡು ಆ ಯೋಜನೆಯ ಮೂಲಕ ಇಂತಹ ಬರಗಾಲ ಪ್ರದೇಶಗಳನ್ನು ಅಭಿವೃದ್ಧಿ ಮಾಡಲಿಕ್ಕೆ ಸರ್ಕಾರದವರು ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ. ಬಿಜಾಪುರ ಜಿಲ್ಲೆಗೆ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಧೇನು ಆಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಈ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಬೇಗನೆ ಕೈಕೊಳ್ಳುವಂತೆ ಸರ್ಕಾರದವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮತ್ತು ಈ ಬಗ್ಗೆ ಕೇಂದ್ರ ಸರ್ಕಾರದವರ ಮೇಲೆ ಒತ್ತಡವನ್ನು ತರಬೇಕು. ಇದು ಇನ್ನೂ ತಡವಾಗುತ್ತದೆಂಬ ವಿಚಾರ ಇದೆ. ಇದರಿಂದ ಈ ಜಿಲ್ಲೆಯಲ್ಲಿ 4 ಲಕ್ಷ ಎಕರೆ ನೀರಾವರಿಯಾಗುವ ಯೋಜನೆ ಇದೆ. ಇದರ ಬಗ್ಗೆ ಸರ್ಕಾರ ಕ್ರಮವನ್ನು ಕೈಗೊಂಡಿದೆ. ಅದಕ್ಕಾಗಿ ಸರ್ಕಾರದವರನ್ನು ಅಭಿನಂದಿಸು ತ್ತೇನೆ. ಇನ್ನೂ ತೀವ್ರವಾದ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕು.

ಇನ್ನು ಅರ್ಥಿಕಾಭಿವೃದ್ಧಿ ದೃಷ್ಟಿಯಿಂದ ನನಗನ್ನಿಸುತ್ತದೆ, ಈ ಆರ್ಥಿಕ ಪರಿಸ್ಥಿತಿಯಲ್ಲಿ ಏನು ಯೋಜನೆಯನ್ನು ಸರ್ಕಾರದವರು ಹಾಕಿಕೊಂಡಿದ್ದಾರೆ ಅದರಲ್ಲಿ ಒಂದು ಶಿಸ್ತು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಸರ್ಕಾರದವರು ಅನಾವಶ್ಯಕವಾಗಿ ಬೋರ್ಡುಗಳು, ಕರ್ಪೊರೇಷನ್‌ಗಳನ್ನು ಹೆಚ್ಚಿಸುತ್ತಿದ್ದಾರೆ. 4ನ್ನು 6 ಮಾಡುವುದು, 8ನ್ನು 12 ಮಾಡುವುದು ಹೀಗೆ ಉಚ್ಚ ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುತ್ತಿದ್ದಾರೆ. ಕೆಲವು ಅಧಿಕಾರಿಗಳಿಗೆ ಪೆನ್‌ಷನ್ ಆಗಿರುತ್ತದೆ. ಅವರ ಅಧಿಕಾರವಧಿಯನ್ನು ಹೆಚ್ಚಿಸುತ್ತಿದ್ದಾರೆ. ಇದರಿಂದ ಬಹಳ ಕಷ್ಟದ ದೆಸೆಗೆ ಹೋಗಬೇಕಾಗುತ್ತದೆ. ಎಕ್ಸ್‌ಟೆನ್‌ಷನ್ ಆಫ್ ಸರ್ವೀಸಸ್, ಎಸ್ಟಾಬ್ಲಿಷ್‌ಮೆಂಟ್ ಆಫ್ ನಂಬರ್ ಆಫ್ ಬೋರ್ಡ್ಸ್ ಯಾವುದನ್ನು ಮಾಡಿದ್ದಾರೆ ಅದನ್ನು ಬಿಡಬೇಕು. ಸೇಲ್ಸ್‌ಟ್ಯಾಕ್ಸ್ ಮತ್ತು ಇನ್‌ಕಮ್ ಟ್ಯಾಕ್ಸ್ ರಿಕವರಿಯನ್ನು ಸರಿಯಾಗಿ ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹಣ ಸಂಗ್ರಹವಾಗುತ್ತದೆ, ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ ಎಂಬ ಆಲೋಚನೆ ಇದೆ. ಈ ದಿಶೆಯಲ್ಲಿ ಸರ್ಕಾರ ದವರು ಕಾರ್ಯಕ್ರಮವನ್ನು ಕೈಕೊಳ್ಳಬೇಕಾಗಿದೆ ಇನ್ನೊಂದು ಮಾತು ನಮ್ಮ ಬಿಜಾಪುರದ ಜಿಲ್ಲೆಯ ಬಗ್ಗೆ ಹೇಳಿಬಿಡುತ್ತೇನೆ. ನಮ್ಮ ಬಿಜಾಪುರ ಜಿಲ್ಲೆ ಹಿಂದುಳಿದಿರುವ ಜಿಲ್ಲೆ. ನನಗೆ ಗೊತ್ತಿರುವ ಹಾಗೆ ಹಿಂದಿನ ಕಾಂಗ್ರೆಸ್ ಸರ್ಕಾರವೇ ಆಗಲಿ ಈಗಿನ ಕಾಂಗ್ರೆಸ್ ಸರ್ಕಾರವೇ ಆಗಲಿ ಈ ಜಿಲ್ಲೆಯ ಬಗ್ಗೆ ಹೆಚ್ಚಿನ ಗಮನ ಕೊಟ್ಟಿಲ್ಲ. ಈ ಜಿಲ್ಲೆಯ ಸಂಪರ್ಕ ಮಾರ್ಗಗಳ ವಿಚಾರ ನೋಡಿದರೆ ನನಗೆ ತಿಳಿದಮಟ್ಟಿಗೆ ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗಿಂತಲೂ ಅತಿ ಕಡಿಮೆ ಖರ್ಚಿನಲ್ಲಿ ರಸ್ತೆಗಳನ್ನು ಮಾಡಿದ್ದಾರೆಂಬುದು ಬಹಳ ವಿಷಾದದ ಸಂಗತಿ. ಇದನ್ನು ತಮ್ಮ ನಜರಿಗೆ ತರಬಯಸುತ್ತೇನೆ. ತಂದೆತಾಯಿಗಳು ತಮ್ಮ ಅಶಕ್ತ ಮಕ್ಕಳ ಬಗ್ಗೆ ಹೇಗೆ ಕಾಳಜಿ ಮಾಡುತ್ತಾರೆಯೋ ಹಾಗೆ ಸರ್ಕಾರ ದವರು ಹಿಂದೆ ಉಳಿದಿರುವಂಥ ಬರಗಾಲದ ದವಡೆಗೆ ಸಿಕ್ಕಿರುವಂಥ ಈ ಜಿಲ್ಲೆಯ ಬಗ್ಗೆ ಕಾಳಜಿ ತಗೆದು ಕೊಳ್ಳಬೇಕು. ಹಾಗೆ ಕಾಳಜಿ ತೆಗೆದುಕೊಂಡರೆ ಮಾತ್ರ ಅಭಿವೃದ್ಧಿಯಾಗುತ್ತದೆ. ಇಲ್ಲದೆ ಹೋದರೆ ಹಾಗೆಯೇ ಹಿಂದುಳಿಯುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಹೆಚ್ಚು ಕಾರ್ಯಕ್ರಮವನ್ನು ತೆಗೆದುಕೊಂಡು ಎಲ್ಲರನ್ನೂ ಕಾಪಾಡಬೇಕು. ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎ. ನಂಜಪ್ಪ (ಅರಸೀಕೆರೆ).—ಮಾನ್ಯ ಅಧ್ಯಕ್ಷಣಿಯರೇ, ರಾಜ್ಯಪಾಲರು ಈ ಸದನಲ್ಲಿ ಮಾಡಿದಂತ ಭಾಷಣದ ವಂದನಾ ನಿರ್ಣಯಕ್ಕೆ ನಾನು ಪೂರ್ಣವಾಗಿ ವಿರೋಧಿಸುತ್ತೇನೆ. ರಾಜ್ಯಪಾಲರ ಭಾಷಣ ಸರ್ಕಾರದ ಆಡಳಿತ ಮಂಡಳಿಯಲ್ಲಿ ಇರತಕ್ಕಂಥವರ ಮನೋಭಾವ, ಅವರು ಹೇಳಿ ಬರೆಸಿಕೊಟ್ಟಂಥ ಗಿಳಿ ಪಾಠದ ಮಾದರಿಯಲ್ಲಿ ಇದೆ. ಅವರ ಭಾಷಣದಲ್ಲಿ ದೇಶದ ಅಭಿವೃದ್ಧಿ ಬಗ್ಗೆ, ಯೋಜನೆಗಳ ಬಗ್ಗೆ, ಅಭಾವದ ಬಗ್ಗೆ ಆಹಾರದ ಕೊರತೆಯ ಬಗ್ಗೆ ರಚನಾತ್ಮಕವಾದ ಸಲಹೆಗಳು ಯಾವುದೂ ಇಲ್ಲ, ಈ ಒಂದು ದೃಷ್ಟಿಯಿಂದ ಇದನ್ನು ನಾನು ಪೂರ್ಣವಾಗಿ ವಿರೋಧಿಸುತ್ತೇನೆ. ಆಹಾರದ ಅಭಾವ, ತೈಲದ ಬಿಕ್ಕಟ್ಟು ಮತ್ತು ಹಣದುಬ್ಬರ ಇವುಗಳಿಗೆ ಸರ್ಕಾರದ ಆರ್ಥಿಕ ನೀತಿ ಮೂಲ ಕಾರಣವೆಂದು ಹೇಳುವುದಕ್ಕೆ ಇಚ್ಛಿಸುತ್ತೇನೆ. 1 ರೂ 50 ಪೈಸೆ ಕೊಟ್ಟರೂ ಅಕ್ಕಿಗೆ ಅಭಾವ ಇದೆ. ಇದೇ ಕಾಲದಲ್ಲಿ 3–3½ ರೂಪಾಯಿಗಳನ್ನು ಕೊಟ್ಟರೆ ಸಾವಿರಾರು ಕ್ವಿಂಟಲ್‌ಗಳಷ್ಟು ಅಕ್ಕಿ ಪೇಟೆಯಲ್ಲಿ ದೊರೆಯುತ್ತದೆ. ಆದುದರಿಂದ ಆಹಾರದ ಪರಿಸ್ಥಿತಿ ಸುಧಾರಿಸುತ್ತಿದೆ ಎಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಸರ್ಕಾರದ ಆಹಾರದ ವಿತರಣೆ, ಅದನ್ನು ಸಾರ್ವಜನಿಕರಿಗೆ ಹಂಚುವಿಕೆಯಲ್ಲಿ ಇರತಕ್ಕ ಲೋಪದೋಷಗಳು ಈ ಕೃತಕ ಅಭಾವಕ್ಕೆ ಕಾರಣವಾಗಿದೆ. ಈ ಕೃತಕ ಅಭಾವಕ್ಕೆ ಆಹಾರದ ಹಂಚಿಕೆಯಲ್ಲಿ ಇರತಕ್ಕ ಲೋಪವೇ ಮೂಲಕಾರಣವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ಭೂಸುಧಾರಣೆ ವಿಷಯದಲ್ಲಿ ನಾನು ಹೆಚ್ಚು ಪ್ರಸ್ತಾಪಮಾಡುವುದಕ್ಕೆ ಹೋಗುವುದಿಲ್ಲ. ಈ ಭೂಸುಧಾರಣೆ ಆಗಬೇಕು ಎನ್ನತಕ್ಕವರಲ್ಲಿ ಭೂಸುಧಾರಣೆಯನ್ನು ಸ್ವಾಗತ ಮಾಡತಕ್ಕವರಲ್ಲಿ ನಾನು ಮೊದಲನೆಯವನು. ಈ ಭೂಸುಧಾರಣೆಯಿಂದ ಉತ್ತಮ ಫಲ ದೊರೆಯುತ್ತದೆ, ಜಮೀನು ಇಲ್ಲದವರಿಗೆ ಜಮೀನು ದೊರೆಯುತ್ತದೆ, ಉಳುವವರ ಉದ್ಧಾರವಾಗುತ್ತದೆ, ಆದರೆ ಪ್ರಾಮಾಣಿಕ ರೀತಿಯಲ್ಲಿ ನಡೆದುಕೊಂಡು ಬರುತ್ತಿಲ್ಲ. ಈ ಭೂಸುಧಾರಣೆಯು ಸ್ವಲ್ಪ ಮಟ್ಟಿಗೆ ನಿರಾಶಾದಾಯಕವಾಗಿದೆಯೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಈ ಭೂಸುಧಾರಣೆಯಲ್ಲಿ ನೇಮಕವಾಗಿರತಕ್ಕ ಲ್ಯಾಂಡ್ ಟ್ರಿಬ್ಯುನಲ್ ಕಮಿಟಿ ಏನು ಇದೆ ಅದು ರಾಜಕೀಯದಿಂದ ಕೂಡಿರತಕ್ಕ, ಒಂದು ಏಕಪಕ್ಷೀಯವಾದ ಕಮಿಟಿ ಇದಾಗಿದೆ. ಇದರಿಂದ ಉತ್ತಮವಾದ ನ್ಯಾಯ ದೊರೆಯುವುದಿಲ್ಲ ಎಂದು ಹೇಳುತ್ತಾ ಈ ಲ್ಯಾಂಡ್ ಟ್ರಿಬ್ಯುನಲ್ ಬಗ್ಗೆ ಪುನರ್ ಪರಿಶೀಲನೆ ಆಗಬೇಕಾದುದು ಮುಖ್ಯ ಎಂಬ ವಿಚಾರವನ್ನು ತಮ್ಮ ಅವಗಾಹನೆಗೆ ತರುವುದಕ್ಕೆ ಬಯಸುತ್ತೇನೆ. ಇನ್ನು ಕೃಷಿ ಅಭಿವೃದ್ಧಿ ಬಗ್ಗೆ ನಾನಾ ಯೋಜನೆಗಳನ್ನು ಕೈಗೊಂಡಿದ್ದಾರೆ. ನಮ್ಮ ಕರ್ನಾಟಕದಲ್ಲಿ ನೀರಾವರಿ ಅಂಕಿ ಅಂಶಗಳನ್ನು ನೋಡಿದರೆ ಕಳೆದ 25 ವರ್ಷಗಳಿಂದ ಸತತವಾಗಿ ಸರ್ಕಾರದವರು ಪ್ರಯತ್ನ ಮಾಡುತ್ತಿದ್ದಾರೆ. ಈ ನೀರಾವರಿ ಅಭಿವೃದ್ಧಿ ಎಂದು ಏನು ಹೇಳುತ್ತಾರೆ ಅದರ ಬಗ್ಗೆ ಇನ್ನೂ ಅಭಿವೃದ್ಧಿ ಆಗಿಲ್ಲ. ತಮಿಳುನಾಡಿನಲ್ಲಿ 100ಕ್ಕೆ 65–66 ಪರ್ಸೆಂಟ್ ನೀರಾವರಿ ಸೌಲಭ್ಯ ಇರುವಾಗ ನಮ್ಮ ರಾಜ್ಯದಲ್ಲಿ ಕೇವಲ 4–5 ಪರ್ಸೆಂಟ್ ಮಾತ್ರ ಮುಂದಕ್ಕೆ ಹೋಗಿದ್ದಾರೆ ಎಂದು ಹೇಳುವುದಕ್ಕೆ ವಿಶಾದವಾಗುತ್ತದೆ. ಏಕೆಂದರೆ ಈ ಆಹಾರದ ಅಭಾವವನ್ನು ಹೋಗಲಾಡಿಸತಕ್ಕದ್ದು ಪ್ರಮುಖವಾದ ಕೆಲಸ. ಈ ಕೆಲಸಕ್ಕೆ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಿದರೆ ನಾವು ಕೊನೆಯಪಕ್ಷ 20 ಪರ್ಸೆಂಟ್ ಜಾಸ್ತಿ ಮಾಡುವುದಕ್ಕೆ ಅವಕಾಶ ಇತ್ತು. ಸರ್ಕಾರದವರು ಈ ವಿಷಯದಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ನಡೆಸಿಲ್ಲವೆಂದು ಈ ಸಂದರ್ಭದಲ್ಲಿ ತಮ್ಮ ಅವಗಾಹನೆಗೆ ತರುವುದಕ್ಕೆ ಬಯಸುತ್ತೇನೆ. ಈ ಆಹಾರದ ಸಂಗ್ರಹಣೆ ಶಾಸ್ತ್ರೀಯವಾದ ರೀತಿಯಲ್ಲಿ ಇಲ್ಲ. ಆಹಾರದ ಸಂಗ್ರಹಣೆ ಕಾರ್ಯ ಬಗಡಾಯಿಸಿದೆ. ಇದು ಸಣ್ಣ ರೈತರಿಗೆ ಹಿಂಸೆಯನ್ನು ಕೊಡುವ ರೀತಿಯಲ್ಲಿ ಇದೆ. ಈ ರೈತರಿಗೆ ಎಷ್ಟು ಕಿರುಕುಳವಾಗುತ್ತಿದೆ, ಎಷ್ಟು ತೊಂದರೆಯಾಗುತ್ತಿದೆ ಎಂಬುದನ್ನು ನಾವು ಅನೇಕಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಈ ಸಣ್ಣ ರೈತರು ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕವರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಹೀಗೆ ಸಂಗ್ರಹಣೆಯಾದಂಥ ಆಹಾರ ಪದಾರ್ಥದಲ್ಲಿ ಲೋಪದೋಷ ಇದೆ. ಆಹಾರ ಪದಾರ್ಥಗಳನ್ನು ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಶೇಖರಿಸುತ್ತಾರೆ. ಆಹಾರ ಪದಾರ್ಥಗಳನ್ನು ಶೇಖರಿಸತಕ್ಕ ಕಾಲದಲ್ಲಿ ಸರಿಯಾದ ರೀತಿಯಲ್ಲಿ ಶೇಖರಣೆ ಆಗದೆ ದಾಸ್ತಾನಿಗೆ ಹುಳು ಬದ್ದು ಲಕ್ಷಾಂತರ ಚೀಲಗಳಷ್ಟು ಆಹಾರ ಪದಾರ್ಥಗಳು ಹಾಳಾಗುತ್ತಿದೆ. ನೂರಾರು ಚೀಲಗಳಷ್ಟು ಆಹಾರ ಪದಾರ್ಥಗಳು ಕೆಟ್ಟುಹೋಗಿದ್ದರೆ ಸಾವಿರಾರು ಚೀಲ ಎಂದು ಅವುಗಳನ್ನು ಮಹಜರ್ ಮಾಡಿ ಅತ್ಯಂತ ಕಡಿಮೆ ದರದಲ್ಲಿ ಮಾರಾಟ ಮಾಡಿರುವ ಬಗ್ಗೆ ನಮ್ಮಲ್ಲಿ ಅನೇಕ ನಿದರ್ಶನಗಳಿವೆ. ಹೀಗೆ ಆಗುವುದನ್ನು ವಿಮರ್ಶೆಮಾಡಿ ಆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಸಹಕಾರ ಮತ್ತು ಮಾರಾಟಗಳ ತತ್ವದಲ್ಲಿ ಅಚಲ ನಂಬಿಕೆಯಿಟ್ಟುಕೊಂಡಿರುವವನು ನಾನು. ಸಹಕಾರ ಸಂಘಗಳಲ್ಲಿ ನಾನು ಇಪ್ಪತ್ತಾರು ವರ್ಷಗಳಿಂದ

ಕೆಲಸ ಮಾಡಿಕೊಂಡು ಬಂದಿದ್ದೇನೆ. ಈ ಸಹಕಾರ ತತ್ವದಲ್ಲಿ ಸಾರ್ವಜನಿಕರಿಗೆ ನಂಬಿಕೆ ಕಡಿಮೆಯಾಗುತ್ತಿದೆ.

ಸಹಕಾರ ಸಂಘಗಳ ಆಡಿಟ್ಟನ್ನು ಮಾಮೂಲು ರೀತಿಯಲ್ಲಿ ಮಾಡುತ್ತಾರೆ. ಆಡಿಟರವರಿಗೆ ಸ್ವಲ್ಪ ಮನವೊಲಿಸಿದರೆ 'ಸಿ' ವರ್ಗದ ಸೊಸೈಟಿಯನ್ನು 'ಎ' ವರ್ಗವೆಂದು ಮಾಡಿ ಅಲ್ಲಿರತಕ್ಕ ಲೋಪದೋಷಗಳನ್ನು ಮುಚ್ಚುವುದರ ಮುಖಾಂತರ ಷೇರು ಹೋಲ್ಡರುಗಳಿಗೆ, ಸಾರ್ವಜನಿಕರಿಗೆ ಅನ್ಯಾಯವಾಗುತ್ತದೆ. ಸಹಕಾರ ತತ್ವ ಬಹಳ ಶ್ರೇಷ್ಠವಾದುದು. ಅದನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರದವರು ಮನಸ್ಸು ಮಾಡಬೇಕು. ಸಹಕಾರ ಕಾನೂನುಗಳನ್ನು ಪುನರ್ಪರಿಶೀಲನೆ ಮಾಡಿ ಅವುಗಳನ್ನು ತಿದ್ದುಪಾಟು ಮಾಡಬೇಕು. ಪಟ್ಟಭದ್ರ ಹಿತಗಳು, 25–30 ವರ್ಷದಿಂದ ಸಂಸ್ಥೆಯ ಅಧ್ಯಕ್ಷರಾಗಿದ್ದುಕೊಂಡು ಅದರ ಫಲವನ್ನು ಅವರ ಅನುಯಾಯಿಗಳು ಅನುಭವಿಸುತ್ತಿದ್ದಾರೆ. ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡಿಕೊಂಡು ಬರುವ ಕಡೆ ಅವುಗಳಿಗೆ ಪ್ರೋತ್ಸಾಹ ಸಿಕ್ಕಬೇಕು. ಆದರೆ ಸರ್ಕಾರದವರು ಉತ್ತಮವಾಗಿ ಕೆಲಸ ಮಾಡಿಕೊಂಡು ಬರುತ್ತಿರುವ ಕೆಲವು ಸಹಕಾರ ಸಂಘಗಳನ್ನು ಏಕಪಕ್ಷೀಯ ಮನೋಭಾವದಿಂದ ರದ್ದು ಮಾಡಿ. ಅನೇಕ ಲೋಪದೋಷಗಳಿವೆಯೆಂದು ಆಡಿಟರ್ ಎತ್ತಿ ತೋರಿಸಿರತಕ್ಕ ಸಂಸ್ಥೆಗಳನ್ನು ಸೂಪರ್‌ಸೀಡ್ ಮಾಡಿಲ್ಲ ಅಥವಾ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಂಡಿಲ್ಲ. ಈ ತರಹ ಪಕ್ಷಪಾತ ದೃಷ್ಟಿಯಿಂದ ನಡೆದರೆ ದೇಶಕ್ಕೆ ಒಳ್ಳೆಯದಾಗುವುದಿಲ್ಲ. ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಅಲ್ಲದೆ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಆಡಿಟರ್ ಜನರಲ್ ಅವರ ಇಲಾಖೆಗೆ ಒಳಪಡಿಸುವುದರ ಮುಖಾಂತರ ನಿಷ್ಪಕ್ಷಪಾತವಾಗಿ ಆಡಿಟ್ ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕು.

ವಿದ್ಯುಚ್ಛಕ್ತಿಯ ವಿಚಾರವಾಗಿ ಮಾತನಾಡುವುದಾದರೆ ಹಳ್ಳಿ ಹಳ್ಳಿಗಳಿಗೂ ವಿದ್ಯುತ್ತನ್ನು ಒದಗಿಸುತ್ತೇವೆಂದೂ, ಪ್ರತಿಯೊಂದು ಕ್ಷೇತ್ರಕ್ಕೂ ವಿದ್ಯುತ್ತನ್ನು ಒದಗಿಸುತ್ತೇವೆಂದೂ ಘೋಷಿಸುತ್ತಿದ್ದಾರೆ ಆದರೆ ವಿದ್ಯುಚ್ಛಕ್ತಿ ಮಂಡಲಿಯವರು ಹೊರಡಿಸಿರುವ ರಿಪೋರ್ಟ್‌ನ್ನು ನೋಡಿದರೆ ವಿದ್ಯುಚ್ಛಕ್ತಿ ಇಲ್ಲದೆ ಇರತಕ್ಕ ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಬೇಕಾದರೆ ಕನಿಷ್ಠಪಕ್ಷ 25 ವರ್ಷವಾದರೂ ಬೇಕಾಗುತ್ತದೆ. ಈ ತರಹ ಆದರೆ ನಮ್ಮ ಗುರಿ ಸಾಧನೆಯಾಗುವುದಿಲ್ಲ. ವಿದ್ಯುಚ್ಛಕ್ತಿ ಬಹಳ ಮುಖ್ಯವಾದುದು. ಆಹಾರಾಭಾವವನ್ನು ಹೋಗಲಾಡಿಸುವುದಕ್ಕೆ, ವ್ಯವಸಾಯಕ್ಕೆ ಮತ್ತು ದೀಪಕ್ಕೆ ವಿದ್ಯುಚ್ಛಕ್ತಿ ಬೇಕು. ವಿದ್ಯುಚ್ಛಕ್ತಿ ಮಂಡಲಿ ಚುರುಕಾಗಿ ಕೆಲಸ ಮಾಡುವಂತೆ ಅದಕ್ಕೆ ಇನ್ನೂ ಹೆಚ್ಚು ಹಣವನ್ನು ಒದಗಿಸುವುದರ ಮುಖಾಂತರ ಎಲ್ಲ ಗ್ರಾಮಗಳಿಗೂ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಗ್ರಾಮಾಂತರ ರಸ್ತೆಗಳು ಶೋಚನೀಯವಾದ ಸ್ಥಿತಿಯಲ್ಲಿವೆ. ಗ್ರಾಮಾಂತರ ರಸ್ತೆಗಳ ಬಗ್ಗೆ ಒಂದು ಯೋಜನೆಯನ್ನು ಮಾಡಿ ವರ್ಷಕ್ಕೆ ಇಷ್ಟು ಮೈಲಿ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯ ವಶಕ್ಕೆ ತೆಗೆದುಕೊಂಡು ಗ್ರಾಮಾಂತರ ಸಂಪರ್ಕವನ್ನು ಕಲ್ಪಿಸಿ ಜನಗಳಿಗೆ ಅನುಕೂಲ ಮಾಡುವುದಾಗಿ ಘೋಷಣೆಯನ್ನೇನೋ ಮಾಡಿದರು. ಆದರೆ ಈ ರಸ್ತೆಗಳಲ್ಲಿ ಮನುಷ್ಯರು ತಿರುಗಾಡುವುದಕ್ಕೆ ಸಾಧ್ಯವಿಲ್ಲ. ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡಿರತಕ್ಕ ರಸ್ತೆಗಳು ಕೂಡ ಇದೇ ಸ್ಥಿತಿಯಲ್ಲಿವೆ. ಹಾಸನ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಂತೆ ಒಂದು ಹಗರಣ ನಡೆದ ಮೇಲೆ ಅಲ್ಲಿ ಕೆಲಸಕಾರ್ಯಗಳು ತಟಸ್ಥವಾಗಿವೆ, ನಿಂತು ಹೋಗಿವೆ ಎಂದರೂ ತಪ್ಪಾಗಲಾರದು. ಅರಸೀಕೆರೆ ಕ್ಷೇತ್ರದಲ್ಲಿ ಈಗ ಎರಡು ವರ್ಷಗಳಿಂದ ಯಾವ ರಸ್ತೆಯನ್ನೂ ಕೂಡ ದುರಸ್ತು ಮಾಡಿಲ್ಲ, ಹೊಸ ರಸ್ತೆಗಳ ನಿರ್ಮಾಣ ಇಲ್ಲವೇ ಇಲ್ಲ. ಈ ರೀತಿ ಆದರೆ ಜನಗಳಿಗೆ ದ್ರೋಹ ಮಾಡಿದಹಾಗೆ ಆಗುತ್ತದೆ. ಎಲ್ಲ ಕ್ಷೇತ್ರಗಳಲ್ಲಿಯೂ ರಾಜ್ಯವನ್ನು ಸರ್ವತೋಮುಖವಾಗಿ ಅಭಿವೃದ್ಧಿ ಮಾಡುತ್ತೇವೆನ್ನುವ ಘೋಷಣೆಯು ತಪ್ಪಾಗುತ್ತದೆ. ಆದ್ದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಉತ್ತಮ ಸಂಪರ್ಕವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶಿಕ್ಷಣದ ವಿಚಾರವನ್ನು ತೆಗೆದುಕೊಂಡರೆ ಶಿಕ್ಷಣ ಸಂಸ್ಥೆಗಳು ಜಾಸ್ತಿಯಾಗಿವೆ. ಎಷ್ಟು ಜಾಸ್ತಿಯಾಗಿವೆ ಎಂದರೆ ವಿದ್ಯಾಭ್ಯಾಸಕ್ಕೆ ಹೋಗುವ ವಿದ್ಯಾರ್ಥಿಗಳ ಜನಸಂಖ್ಯೆಗೆ ಅನುಗುಣವಾಗಿ ಶಿಕ್ಷಣ ಸಂಸ್ಥೆಗಳ ಸಂಖ್ಯೆ ಜಾಸ್ತಿಯಾಗಿಲ್ಲ. ಯಾವ ಶಾಲೆಯಲ್ಲಿ, ಯಾವ ಕಾಲೇಜಿನಲ್ಲಿ ನೋಡಿದರೂ ವಿದ್ಯಾರ್ಥಿಗಳು ತುಂಬಿದ್ದಾರೆ. ಅನೇಕ ಸಂದರ್ಭಗಳಲ್ಲಿ ನಮ್ಮ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ದೊರೆಯುವುದು ಕಷ್ಟವಾಗುತ್ತದೆ. ಇದು ನಿಜವಾಗಿ ಸುಖೀರಾಜ್ಯ ಎಂದು ಹೇಳುವ ಕಡೆ

ತಲೆ ತಗ್ಗಿಸಬೇಕಾದ ವಿಚಾರವಾಗಿದೆ. ನಾವು ನಮ್ಮ ಮಕ್ಕಳಿಗೆ ಉತ್ತಮವಾದ ಶಿಕ್ಷಣ ದೊರೆಯು ವುದಕ್ಕೆ ಅವಕಾಶ ಮಾಡಿಕೊಡದೆ ಹೋದರೆ ತಪ್ಪಾಗುತ್ತದೆ. ಶಿಕ್ಷಣ ಸಂಸ್ಥೆಗಳನ್ನು ಜಾಸ್ತಿ ಮಾಡಬೇಕು, ಇರತಕ್ಕ ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುವುದಕ್ಕೆ ಅವಕಾಶವಾಡಿ ಕೊಡಬೇಕು.

ವಿದ್ಯಾರ್ಥಿವೇತನಗಳ ಬಗ್ಗೆ ಹೇಳುವುದಾದರೆ ಮಾನ್ಯ ಪ್ರಭಾಕರ್ ಅವರು ಹೇಳಿದಂತೆ ವರ್ಷದ ಕೊನೆಯವರೆಗೂ ವಿದ್ಯಾರ್ಥಿವೇತನ ದೊರೆಯುವುದಿಲ್ಲ. ಇದರಿಂದ ಬಡವರಿಗೆ ತೊಂದರೆಯಾಗುತ್ತದೆ. ವಿದ್ಯಾರ್ಥಿವೇತನ ಕಾಲಕ್ಕೆ ಸರಿಯಾಗಿ ದೊರೆಯುವುದಕ್ಕೆ ವ್ಯವಸ್ಥೆ ಯನ್ನು ಮಾಡಬೇಕು ಎಂದು ನಾನು ಸರ್ಕಾರವನ್ನು ಈ ಮೂಲಕ ಒತ್ತಾಯ ಮಾಡುತ್ತೇನೆ.

ಜನಾರೋಗ್ಯ ಮತ್ತು ವಸತಿ. ಜನಾರೋಗ್ಯ ವಿಚಾರದಲ್ಲಿ ಹೇಳುವುದಾದರೆ ಗ್ರಾಮಾಂತರ ಪ್ರದೇಶದ ಜನರಿಗೆ ವೈದ್ಯಕೀಯ ಸೌಲಭ್ಯ ಉತ್ತಮವಾದ ರೀತಿಯಲ್ಲಿ ದೊರೆಯುತ್ತಿಲ್ಲ. ಪರಿಣತರಾದ ವೈದ್ಯರು ನಗರಗಳಲ್ಲಿ ಮತ್ತು ಜಿಲ್ಲಾ ಹೆಡ್‌ಕ್ವಾರ್ಟರುಗಳಲ್ಲಿರುವುದಕ್ಕೆ ಇಷ್ಟ ಪಡುತ್ತಾರೆ, ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರು ಬರುವುದಿಲ್ಲ. ಈ ರೀತಿ ಆದರೆ ಗ್ರಾಮಾಂತರ ಪ್ರದೇಶದ ರೋಗಿಗಳು ನಗರಗಳಿಗೆ ಮತ್ತು ಜಿಲ್ಲಾ ಮುಖ್ಯ ಸ್ಥಳಗಳಿಗೆ ವೈದ್ಯಕೀಯ ಸೌಲಭ್ಯ ವನ್ನು ಪರಿಣತರಿಂದ ಪಡೆಯಲು ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಪರಿಣತ ವೈದ್ಯರ ಸಹಾಯವನ್ನು ದೊರಕಿಸಿಕೊಡಬೇಕು. ಇದರಲ್ಲಿ ಮುಖ್ಯವಾದ ವಿಷಯವೇನೆಂದರೆ ನಗರಸಭೆಯವರು ಆರೋಗ್ಯ ಮತ್ತು ವಿದ್ಯಾಭ್ಯಾಸಕ್ಕೆ ಹಣವನ್ನು ಖರ್ಚು ಮಾಡಬೇಕಾಗಿಲ್ಲವೆಂದು 1974ರಲ್ಲಿ ಒಂದು ಆದೇಶವನ್ನು ಕಳುಹಿಸಿ ಕೊಟ್ಟಿದ್ದಾರೆ. ಇದು ನಿಜ ವಾಗಿ ವಿಷಾದದ ಸಂಗತಿ. ಅನೇಕ ಪುರಸಭೆಗಳಲ್ಲಿ ಬೇಕಾದಷ್ಟು ಕ್ಲೋಸಿಂಗ್ ಬ್ಯಾಲೆನ್ಸ್ ಹಣ ಇರುತ್ತದೆ. ಅವರು ಮಾಡತಕ್ಕ ಕೆಲಸಕಾರ್ಯಗಳನ್ನು ಮಾಡಿಯೂ ಹಣ ಉಳಿಯುವಂಥ ಪುರಸಭೆ ಗಳಿರುತ್ತವೆ. ಸರ್ಕಾರದವರು ತಾವು ಸೌಕರ್ಯಗಳನ್ನು ಒದಗಿಸುವುದಕ್ಕಾಗದೆ ಇದ್ದರೂ ಕೂಡ ಹಣವನ್ನು ಖರ್ಚು ಮಾಡುವುದಕ್ಕೆ ಮುಂದೆ ಬರತಕ್ಕ ಪುರಸಭೆಗಳಿಗೆ ವೈದ್ಯಕೀಯ ಮತ್ತು ಶಿಕ್ಷಣ ಸಂಸ್ಥೆಗಳಿಗೆ ಹಣವನ್ನು ಖರ್ಚು ಮಾಡುವುದಕ್ಕೆ ಅವಕಾಶವನ್ನು ಕೊಡಲು ಮತ್ತು ಹಿಂದೆ ಹೊರಡಿಸಿ ರುವ ಆದೇಶವನ್ನು ವಾಪಸ್ಸು ಪಡೆಯುವುದರ ಮೂಲಕ ಸಹಾಯಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ಮಾನ್ಯ ರಾಜ್ಯಪಾಲರ ಭಾಷಣ ಸಮರ್ಪಕವಾಗಿಲ್ಲ, ರಚನಾತ್ಮಕವಾಗಿಲ್ಲ, ಗಿಳಿ ಪಾಠದಂತೆ ಇದೆ. ಇದನ್ನು ಸಂಪೂರ್ಣವಾಗಿ ವಿರೋಧಿಸಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಮಹೇಂದ್ರ ಕುಮಾರ್ ಕಲ್ಲಪ್ಪ (ಹುಲ್ಸೂರು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ನಾನು ಮನಃ ಪೂರ್ವಕವಾಗಿ ಸ್ವಾಗತಿಸುತ್ತ ಕೆಲವು ವಿಚಾರಗಳನ್ನು ಸರ್ಕಾರದ ಎದುರಿನಲ್ಲಿ ಇಡಲಿಕ್ಕೆ ಇಷ್ಟಪಡುತ್ತೇನೆ.

ತಮಗೆಲ್ಲಾ ಗೊತ್ತಿರುವಹಾಗೆ ಬಿದರೆ ಜಿಲ್ಲೆಯೂ ಸುಮಾರು ನಾಲ್ಕೈನೂರು ಮೈಲಿ ದೂರವಿದೆ. ಅಲ್ಲಿಂದ ಜನರು ಬಂದು ಪ್ರತಿಯೊಂದು ವಿಷಯವನ್ನು ಹೇಳುವುದಕ್ಕೂ ತ್ರಾಸಾಗು ತ್ತದೆ. ಮತ್ತೆ ಯಾರು ಇಲ್ಲಿ ಬಂದರೂ ಅವರಿಗೆ ಬೇಗ ಬೇಗ ನ್ಯಾಯ ಸಿಕ್ಕಲಿಕ್ಕೆ ಸಾಧ್ಯವಾಗಲಿ ಕ್ಕಿಲ್ಲ. ಅದಕ್ಕಾಗಿ ನನ್ನ ಪ್ರಾರ್ಥನೆ ಏನೆಂದರೆ ಹಿಂದುಳಿದ ಬಿದರೆ ಜಿಲ್ಲೆಗೆ ಬಹಳಷ್ಟು ಗಮನ ಕೊಡಬೇಕು. ಸತತವಾಗಿ ಮೂರು ವರ್ಷ ಬರಗಾಲಕ್ಕೆ ತುತ್ತಾಗಿದ್ದ ಬಿದರೆ ಜಿಲ್ಲೆಯ ಒಕ್ಕಲಿಗರ ಪರಿಸ್ಥಿತಿ ಬಹಳ ಗಂಭೀರವಾಗಿದ್ದರೆ ಅಲ್ಲಿನ ಕೂಲಿಕಾರರ ಪರಿಸ್ಥಿತಿಯನ್ನು ಹೇಳಲಿಕ್ಕೆ ಸಾಧ್ಯವಿಲ್ಲ. ಸರ್ಕಾರವು ಬರಗಾಲದಲ್ಲಿ ಅದಷ್ಟು ಮಟ್ಟಿಗೆ ಸಹಾಯವನ್ನು ಕೊಟ್ಟಿದ್ದಕ್ಕಾಗಿ ಬಿದರೆ ಜಿಲ್ಲೆಯ ಜನತೆಯ ಪರವಾಗಿ ನಾನು ಸರ್ಕಾರಕ್ಕೆ ಋಣಿಯಾಗಿದ್ದೇನೆ. ಆದರೆ ಬರಗಾಲದ ಭಯ ಹೋಗಿ ಎರಡು ವರ್ಷವಾದರೂ ಕೂಡ ಒಂದು ಬೆಳೆಯೂ ಒಕ್ಕಲಿಗರಿಗೆ ಸರಿಯಾದ ಸ್ಥಿತಿಯಲ್ಲಿ ಮುಟ್ಟಿಲ್ಲ. ಆದರೆ ನಮ್ಮ ಸರ್ಕಾರದ ವಿಚಾರ ಏನಿದೆಯೆಂದರೆ, ಆ ಭಾಗದಲ್ಲಿ ಮಳೆ ಸಾಕಷ್ಟು ಬಿದ್ದಿದೆ, ಈಗ ಬರಗಾಲವಿಲ್ಲವೆಂಬ ಕಾರಣದಿಂದ ಕಂದಾಯದ ವಸೂಲಿಯನ್ನು ಜೋರಾಗಿ ಮಾಡಲಾಗುತ್ತದೆ. ನಾನೇನೂ ಕಂದಾಯ ವಸೂಲಿ ಮಾಡಬೇಡಿ ಎಂದು ಹೇಳುವುದಿಲ್ಲ. ಆದರೆ ಯಾರಿಂದ ವಸೂಲಿ ಮಾಡಲು ಸಾಧ್ಯವೋ ಅಂತಹವರಿಂದ ವಸೂಲಿ ಮಾಡಬೇಕೇ ಹೊರತು ಬಡವರಿಂದ ವಸೂಲಿ ಮಾಡ ಬಾರದೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಬಡವರಿಗೆ ಸ್ವಲ್ಪ ಸವಲತ್ತು ಕೊಟ್ಟು ಅನಂತರ ವಸೂಲಿ ಮಾಡಬೇಕೆಂದು ಹೇಳುತ್ತೇನೆ. ನನ್ನದು ಹುಲ್ಸೂರು ಕ್ಷೇತ್ರ. ನನ್ನ ಕ್ಷೇತ್ರಕ್ಕೆ

3 ತಾಲ್ಲೂಕ್‌ಗಳು ಒಳಪಟ್ಟಿವೆ. ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಯಾವ ಒಂದು ಹೆಚ್ಚಿನ ಡೆವಲಪ್‌ಮೆಂಟ್ ಕೆಲಸಗಳು ಆ ಭಾಗಗಳಲ್ಲಿ ಆಗಿಲ್ಲ. ಮುಖ್ಯವಾಗಿ ಆ ಭಾಗ ದಲ್ಲಿ ಮಾಂಜ್ರ ನದಿಗೆ ಅಡ್ಡಲಾಗಿ ಒಂದು ಬ್ರಿಡ್ಜ್ ಆಗಬೇಕಾಗಿದೆ ಕಳೆದ 3 ವರ್ಷಗಳಿಂದ ಈ ಕೆಲಸ ಮಾಡಿ ಕೊಡಬೇಕೆಂದು ನಾವು ಸರ್ಕಾರವನ್ನು ಕೇಳುತ್ತಿದ್ದೇವೆ ಆದರೆ ಇನ್ನೂ ಆ ಕೆಲಸ ವಾಗಿಲ್ಲ ನದಿಯ ಆ ಕಡೆ ಭಾಗದಲ್ಲಿ ಮಹಾರಾಷ್ಟ್ರ ಗಡಿ ಇದೆ ಅಲ್ಲಿ ಅನೇಕ ಕರ್ನಾಟಕದ ಹಳ್ಳಿ ಗಳಿವೆ. ಆ ಜನರಿಗೆ ಆಸ್ಪತ್ರೆ ಮುಂತಾದ ಅನೇಕ ಸೌಕರ್ಯಗಳು ಇನ್ನೂ ವರೆಗೆ ಆಗಿಲ್ಲ. ಮಳೆ ಗಾಲದಲ್ಲಿ 6 ತಿಂಗಳ ಕಾಲ ನದಿ ಜೋರಾಗಿ ಹರಿಯುವುದರಿಂದ ಆ ಭಾಗದ ಜನರು ಈ ಭಾಗಕ್ಕೆ ಬರಲು ತೊಂದರೆಯಾಗಿದೆ. ಅಲ್ಲಿಯೂ ಹೆರಿಗೆಗೆ ಬರುವಂತಹ ಹೆಂಗಸರಿಗೆ ಬಹಳ ಕಷ್ಟವಾಗಿ ಕೆಲವರು ಸತ್ತಿದ್ದಾರೆ ಎಂಬ ನಿದರ್ಶನಗಳು ನಮ್ಮ ಎದುರಿನಲ್ಲಿ ಇವೆ. ಈ ಜನರಿಗೆ ಆಗುವಂತಹ ತ್ರಾಸನ್ನು ತಪ್ಪಿಸಲು ಕೂಡಲೆ ಈ ಬ್ರಿಡ್ಜ್ ಕೆಲಸವನ್ನು ಸರ್ಕಾರದವರು ಮಾಡಿಕೊಟ್ಟರೆ ಬೀದರ್ ಜಿಲ್ಲೆಗೆ ಬಹಳ ಅನುಕೂಲ ಮಾಡಿಕೊಟ್ಟಂತೆ ಆಗುತ್ತದೆ. ಕಳೆದವರ್ಷದ ಬಡ್ಜೆಟ್‌ನಲ್ಲಿ ಈ ಕೆಲಸ ವನ್ನು ಸೇರಿಸಿದ್ದರೂ ಸಹ ಹಣದ ಕೊರತೆಯಿದೆ ಎಂದು ಆ ಕೆಲಸವನ್ನು ತೆಗೆದುಕೊಳ್ಳಲಿಲ್ಲ. ಮಾನ್ಯ ಮಂತ್ರಿಗಳಾದ ಶ್ರೀ ಸುಭಾಷ್ ಅಷ್ಟೂರ್ ಅವರು ಅಲ್ಲಿಗೆ ಬಂದಾಗ ಈ ಕೆಲಸವನ್ನು ಜಾಗ್ರತೆ ಮಾಡಿಕೊಡಬೇಕೆಂದು ಹೇಳಿದ್ದೇವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಹ ಆ ಭಾಗದ ಜನರಿಗೆ ಇನ್ನೂ ಸ್ವಾತಂತ್ರ್ಯ ಸಿಗದೆ ಬಹಳ ಕಷ್ಟ ಅನುಭವಿಸುತ್ತಿದ್ದಾರೆ. ಈ ಕೆಲಸ ಮಾಡಿ ಸಲು ಆ ಜಿಲ್ಲೆಗೆ ಸೇರಿದ ಪ್ರತಿಯೊಂದು ಪಂಚಾಯಿತಿ ಅಧ್ಯಕ್ಷರೂ ಬೆಂಗಳೂರಿಗೆ ಬಂದು ಸಂಬಂಧ ಪಟ್ಟವರನ್ನು ಕಾಣಬೇಕೆಂದು ತೀರ್ಮಾನ ಮಾಡಿದ್ದಾರೆ. ನಮ್ಮ ಜಿಲ್ಲೆಯ ಮುಖಂಡರು ಹಣಕಾಸಿನ ಮಂತ್ರಿಗಳನ್ನು ಭೇಟಿ ಮಾಡಿ ಈ ವಿಷಯ ತಿಳಿಸಿದಾಗ ಅವರು ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಒಪ್ಪುವುದಾದರೆ ಹಣ ಕೊಡಲು ಸಿದ್ಧವೆಂದು ಹೇಳಿದರು. ಈ ಕಾರಣದಿಂದ ಇಬ್ಬರು ಮಂತ್ರಿಗಳನ್ನು ಒಂದೆಡೆ ಕೂರಿಸಿ ಮಾತನಾಡಬೇಕೆಂದು ಪ್ರಯತ್ನಪಟ್ಟಾಗ ಅದು ಸಾಧ್ಯವಾಗು ತ್ತಿಲ್ಲ; ಈಗ ಲೋಕೋಪಯೋಗಿ ಇಲಾಖೆಯ ಚೀಫ್—ಇಂಜಿನಿಯರ್ ಅವರು ಹಣವಿಲ್ಲ; ಆ ಕಾರಣ ದಿಂದ ತೆಗೆದುಕೊಳ್ಳುವುದಿಲ್ಲವೆಂದು ಹೇಳುತ್ತಾರೆ. ಸರ್ಕಾರದವರು ಈ ಸಲದ ಬಡ್ಜೆಟ್‌ನಲ್ಲಿ ಯಾದರೂ ಇದಕ್ಕೆ ಹಣ ಒದಗಿಸಿ ನಿಯಗಾವ್ ಬಳಿ ಮಾಂಜ್ರ ನದಿಗೆ ಒಂದು ಬ್ರಿಡ್ಜ್ ಕಟ್ಟಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಕಾರಂಜ ಪ್ರಾಜೆಕ್ಟ್ ಒಂದನ್ನು ಬಿಟ್ಟರೆ ಬೇರೆ ಯಾವ ಪ್ರಾಜೆಕ್ಟ್ ಗಳು ಸಹ ಆಗಿಲ್ಲ. ಈ ಸರ್ಕಾರದವರು ಅಧಿಕಾರಕ್ಕೆ ಬಂದಮೇಲೆ ಕಾರಂಜ ಪ್ರಾಜೆಕ್ಟ್ ಕೆಲಸ ತೆಗೆದುಕೊಂಡಿದ್ದಾರೆ.ಆದರೆ ಆ ಕೆಲಸ ಕೂಡ ನಿಧಾನವಾಗಿ ನಡೆಯುತ್ತಿದೆ.ಇದು ಜಾಗ್ರತೆಯಾದರೆ ಒಡವಕ್ಕಲಿಗರಿಗೆ ಅನುಕೂಲವಾಗುತ್ತದೆ. ಆ ಭಾಗದಲ್ಲಿ ಕಳೆದ 4 ವರ್ಷಗಳಿಂದ ಸರಿಯಾಗಿ ಮಳೆ ಯಾಗಿಲ್ಲ; ಆದಕಾರಣ ಈ ಯೋಜನೆಯನ್ನು ಜಾಗ್ರತೆ ಮುಗಿಸಿದರೆ ಬಡಜನರಿಗೆ ದೊಡ್ಡ ಉಪಕಾರ ಮಾಡಿದಂತೆ ಆಗುತ್ತದೆ. ಮುಖ್ಯವಾಗಿ ಬಿದರ್ ಜಿಲ್ಲೆ ಕರ್ನಾಟಕ ರಾಜ್ಯದಲ್ಲಿ ಒಂದು ಒಳ್ಳೆಯ ಸ್ಥಾನದಲ್ಲಿರುವಂತೆ ನೋಡಿಕೊಳ್ಳಬೇಕೇ ಹೊರತು ಆ ಜಿಲ್ಲೆಯನ್ನು ಸರ್ಕಾರದವರು ಎಡಗಣ್ಣಿನಿಂದ ನೋಡಬಾರದೆಂದು ಹೇಳುತ್ತೇನೆ.

ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಅಧಿಕಾರಿಗಳಿಂದ ಕೆಲಸ ಕೆಡುತ್ತಿದೆ ಎಂದು ಹೇಳಿದರು. ಆದರೆ ಆ ಮಾತು ಸರಿಯಲ್ಲ; ಸರ್ಕಾರ ಸರಿಯಾಗಿದ್ದರೆ ಅಧಿಕಾರಿಗಳು ಸಹ ಸರಿ ಯಾಗಿ ಕೆಲಸ ಮಾಡುತ್ತಾರೆ. ಆದರೆ ಕೆಲವು ಮುಖಂಡರು ತಮ್ಮ ಒಂದು ಸ್ವಾರ್ಥಕ್ಕಾಗಿ ಅಧಿ ಕಾರಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದು ಸರಿಯಲ್ಲ; ತಮ್ಮ ಕೆಲಸವಾಗದಿದ್ದಾಗ ಅಧಿಕಾರಿಗಳನ್ನು ದೂರುತ್ತಾರೆ; ಮತ್ತೆ ಕೆಲವರು ತಮ್ಮ ಭಾಷಣಕ್ಕೆ ಕಳೆ ಬರಲಿ ಎಂದು ಹರಿಜನರ ವಿಷಯದಲ್ಲಿ ಬಹಳಷ್ಟು ಮಾತನಾಡುತ್ತಾರೆ. ಕೇವಲ ಭಾಷಣದಿಂದ ಅವರ ಉದ್ಧಾರವಾಗುವು ದಿಲ್ಲ. ಹರಿಜನರ ಉದ್ಧಾರವಾಗಬೇಕೆಂದಿದ್ದರೆ ಎಲ್ಲಾ ರಾಜಕಾರಣಿಗಳು ತಮ್ಮ ಮನವನ್ನು ಶುದ್ಧಮಾಡಬೇಕು, ಆವಾಗ ಹರಿಜನರ ಉದ್ಧಾರವಾಗುವುದರಲ್ಲಿ ಸಂದೇಹವಿಲ್ಲ. ಕೆಲವು ಕಡೆ ಒಕ್ಕಲಿಗರು ಮತ್ತು ಲಿಂಗಾಯಿತರು ಹರಿಜನರನ್ನು ತ್ರಾಸು ಕೊಡುತ್ತಾರೆಂತ ಹೇಳುತ್ತಾರೆ. ಇದು ಶುದ್ಧತಪ್ಪು, ಹಳ್ಳಿಗಳಲ್ಲಿ ಹರಿಜನರು ಮತ್ತು ಲಿಂಗಾಯಿತರು, ಒಕ್ಕಲಿಗರು ಒಂದು ಧಾರ್ಮಿಕ ಪ್ರೇಮ ಇಟ್ಟುಕೊಂಡು ಜೀವನ ಸಾಗಿಸುತ್ತಾರೆ.

ಆದರೆ ಕೆಲವು ರಾಜಕಾರಣಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಹಳ್ಳಿಗಳಲ್ಲಿ ಜಾತಿಯತೆಯ ಜಗಳಗಳನ್ನು ಹೆಚ್ಚಿಸುತ್ತಾರೆ.

ಇನ್ನು ಕೊನೆಯದಾಗಿ ಹೇಳುವುದಾದರೆ ಈಗ ವಯಸ್ಸಾದವರಿಗೆ 30 ರೂಪಾಯಿಗಳನ್ನು ಕೊಡಬೇಕೆಂದು ಸರ್ಕಾರದ ಆರ್ಡರ್ ಇದೆ. ಇದು ಎಲ್ಲ ಜಾತಿಯವರಿಗೂ ಅನ್ವಯವಾಗುತ್ತದೆ. ಆದರೆ ಇದನ್ನು ಪಡೆಯಬೇಕಾದರೆ ಹೆಲ್ತ್ ಸರ್ಟಿಫಿಕೇಟ್ ಮತ್ತು ಫೋಟೋ ಬೇಕು. ಇವುಗಳನ್ನು ಮಾಡಿಸಲು ಹಳ್ಳಿಯ ಜನರು ತಾಲ್ಲೂಕ್ ಕೇಂದ್ರಗಳಿಗೆ ಬಂದು ಹತ್ತು ರೂಪಾಯಿಗಳವರೆಗೆ ಖರ್ಚು ಮಾಡಬೇಕಾಗುತ್ತದೆ. ಅಷ್ಟು ಹಣ ಖರ್ಚು ಮಾಡುವ ಶಕ್ತಿ ಆ ಜನರಿಗೆ ಇರುವುದಿಲ್ಲ. ಅವರು ಸಾಯುವ ಕಾಲಕ್ಕೆ ಸರ್ಕಾರಕ್ಕೆ ಒಳ್ಳೆಯ ಅರಿಕೆ ಮಾಡಲು ಸಾಯುವಂತಾಗಲು ಈ ಕೆಲಸವನ್ನು ರೆವಿನ್ಯೂ ಇಲಾಖೆ ಮೂಲಕ ಮಾಡಿಸಿ ಎಲ್ಲರಿಗೂ ಪೆನ್‌ಷನ್ ಸಿಗುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

1-30 P.M.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗಿರಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸುತ್ತೇನೆ; ಮೊಟ್ಟಮೊದಲನೆಯದಾಗಿ ದೇಶದಲ್ಲಿ ಹಬ್ಬಿರುವ ಆಹಾರ ಸಮಸ್ಯೆ ಬಗ್ಗೆ ಒಂದೆರಡು ಮಾತನ್ನು ಹೇಳಬಿಚ್ಛಿಸುತ್ತೇನೆ. ಕಳೆದ ವರ್ಷ ಅಕ್ಕಿ, ಜೋಳ ಮತ್ತು ರಾಗಿ ಬೆಳೆ ಏನು ಇತ್ತು ಮತ್ತು ಈ ವರ್ಷ ಏನು ಇದೆ ಎಂಬುದನ್ನು ನೋಡಿದರೆ, ನಿಜವಾಗಿಯೂ ಬಡ ಜನರು ಜೀವನ ಮಾಡುವುದು ಹೇಗೆ ಎಂಬುದು ನಮಗೂ ಕೂಡ ಯೋಚನೆಯಾಗುತ್ತಾ ಇದೆ. ಆಹಾರ ಸಮಸ್ಯೆ ಈ ಸಾರಿ ಬಹಳ ಇಂಪ್ರೂವ್ ಆಗುತ್ತದೆ ಎಂದು ರಾಜ್ಯಪಾಲರು ಹೇಳಿದ್ದಾರೆ. ಈ ಆಹಾರ ಸಮಸ್ಯೆಯನ್ನು ಇಂಪ್ರೂವ್ ಮಾಡುವುದಕ್ಕೆ ಏನೇನು ಕೆಲಸಕಾರ್ಯಗಳು ನಡೆದಿವೆ ಎನ್ನುವುದನ್ನು ನೋಡಿದರೆ ಅದು ಜೀರೋ ಎಂದು ನಮ್ಮ ಕಣ್ಣಿಗೆ ಕಾಣಿಸುತ್ತದೆ. ಯಾವುದೇ ನೀರಾವರೀ ಯೋಜನೆಗಳು ಮುಗಿದಿಲ್ಲ; ಇದರಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗಿಲ್ಲ. ಇವತ್ತಿನ ದಿವಸ ನಮ್ಮ ಜನರಲ್ಲಿ ನೈತಿಕ ಮಟ್ಟ ಬಹಳ ಇಳಿದು ಹೋಗಿವೆ. ಕಲಬೆರಕೆ ಅಸಾಧ್ಯವಾಗಿದೆ. ಆದರೆ, ಸರ್ಕಾರ ಇದ್ಯಾವುದನ್ನೂ ತಡೆಗಟ್ಟುವುದಕ್ಕೆ ವಿಫಲವಾಗಿದೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಅಕ್ಕಿ ಜೋಳ ಇವೆಕ್ಕೆಲ್ಲಾ ಒಳ್ಳೆಯದು—ಕೆಟ್ಟದೆಲ್ಲವನ್ನೂ ಮಿಕ್ಸ್ ಮಾಡಿ ಹೈರೇಟ್‌ನಲ್ಲಿ ಮಾರುತ್ತಿದ್ದಾರೆ. ಆದರೆ ಸರಕಾರ ಸುಮ್ಮನೆ ಕಣ್ಣು ಮುಚ್ಚಿಕೊಂಡಿದೆ. ಹಣ ಹೆಚ್ಚಿಗೆ ಕೊಟ್ಟರೆ ಆಹಾರ ಸಿಕ್ಕುತ್ತದೆ, ಇಲ್ಲದಿದ್ದರೆ ಇಲ್ಲ. ಇದರ ಬಗ್ಗೆ ಸರಕಾರ ಕಣ್ಣು ಬಿಟ್ಟು ನೋಡಿದೆ ಏನು! ದುಡ್ಡು ಜಾಸ್ತಿ ಕೊಟ್ಟರೆ, ಉತ್ಪತ್ತಿಯಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲವೇನು ? ಉತ್ಪತ್ತಿಯಾದುದೆಲ್ಲಾ ಎಲ್ಲಿ ಹೋಗುತ್ತಾ ಇದೆ? ಇನ್ನು ಸರಕಾರ ಇವತ್ತಿನ ದಿವಸ ವಿಮರ್ಶೆ ಮಾಡದೆ, ಇದರಿಂದ ಬಡ ಜನಗಳು ಜೀವನ ಮಾಡುವುದು ಬಹಳ ಕಷ್ಟವಾಗಿದೆ ; ಆಹಾರಧಾನ್ಯಗಳ ವಿತರಣೆ ಗೊಂದಲಮಯವಾಗಿದೆ. ಇನ್ನು ಹಳ್ಳಿಗಳ ವಿಚಾರ. ಸುಮಾರು ಎರಡು ಸಾವಿರ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ಕೇವಲ 2 ಮೂಟೆ ಅಕ್ಕಿ, ಒಂದು ಮೂಟೆ ಸಕ್ಕರೆ ಕಳುಹಿಸುತ್ತಾರೆ. ಇದರಿಂದ ಹಳ್ಳಿಗಳಲ್ಲಿ ಕಾದಾಟ ಪ್ರಾರಂಭವಾಗುತ್ತವೆ ಎಂದು ಕೆಲವರು ಇದನ್ನು ತೆಗೆದುಕೊಂಡು ಹೋಗುವುದೇ ಇಲ್ಲ. ಹೀಗೆ ಆಹಾರಪದಾರ್ಥಗಳು ಹಳ್ಳಿಗಳಿಗೇ ತಲುಪುತ್ತಲೇ ಇಲ್ಲ.

ಅಧ್ಯಕ್ಷರು.—ತಾವು ಸೋಮವಾರ ತಮ್ಮ ಭಾಷಣವನ್ನು ಮುಂದುವರಿಸಬಹುದು.

Election of Members to the Senate of Bangalore University—Resutls (Announced)

MADAM SPEAKER.—In connection with the election to the Senate of the Bangalore University as the number of nominations is equal to the number of members to be elected, the following members are declared elected and there will be no election in this behalf :

Sriyuths :

1. Andanaiah
2. Bettaswamy Gowda